# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಏಪ್ರಿಲ್ 27, 2021

ಸಂಪುಟ : 47 ಸಂಚಿಕೆ : 357 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com





ದಾವಣಗೆರೆಯಲ್ಲಿ ಅಂಗಡಿ ಮಳಿಗೆ ಅರ್ಧ ಬಾಗಿಲು ಮುಚ್ಚಿರುವುದು

# 'ಕೋವಿಡ್ ಕರ್ಫ್ಯೂ' ಜಾರಿ

## ರಾಜ್ಯಾದ್ಯಂತ ಇಂದು ರಾತ್ರಿಯಿಂದಲೇ ಕಠಿಣ ನಿರ್ಬಂಧ

ಬೆಂಗಳೂರು, ಏ. 26 - ಕೊರೊನಾ ಸೋಂಕಿನ ಹರಡುವಿಕೆ ತಡೆಯಲು ರಾಜ್ಯದಲ್ಲಿ 14 ದಿನ ಕೋವಿಡ್ ಕರ್ಫ್ಯೂ ಜಾರಿ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಪ್ರಧಾನಮಂತ್ರಿ ಲಾಕ್‌ಡೌನ್ ಅನುಷ್ಠಾನ ಬೇಡ ಎಂದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಜನತಾ ಲಾಕ್‌ಡೌನನ್ನು 'ಕೊರೊನಾ ಕರ್ಫ್ಯೂ' ಎಂಬ ಹೆಸರಿನ ಮೂಲಕ ಹೇರಿಕೆ ಮಾಡಿದೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಕರ್ಫ್ಯೂ ಬಗ್ಗೆ ಮಾಹಿತಿ ನೀಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ನಾಳೆ ಮಂಗಳವಾರ ರಾತ್ರಿ 9 ಗಂಟೆಯಿಂದ ಮೇ 10 ಬೆಳಿಗ್ಗೆ 6 ಗಂಟೆಯವರೆಗೂ ಕರ್ಫ್ಯೂ ಜಾರಿಯಲ್ಲಿರುತ್ತದೆ.

ಈ ಅವಧಿಯಲ್ಲಿ ಬೆಳಿಗ್ಗೆ 6 ರಿಂದ 10 ಗಂಟೆಯವರೆಗೆ ದಿನಸಿ, ಹಾಲು, ತರಕಾರಿ ಸೇರಿದಂತೆ ಅಗತ್ಯ ವಸ್ತುಗಳ ಖರೀದಿ ಮತ್ತು ವ್ಯಾಪಾರ ವಹಿವಾಟುಗಳಿಗೆ ಅವಕಾಶ ಕಲ್ಪಿಸಿದ್ದೇವೆ ಎಂದರು.

ಬೆಳಿಗ್ಗೆ 10 ರ ನಂತರ ಎಲ್ಲಾ ವ್ಯಾಪಾರ ಸ್ಥಗಿತಗೊಳಿಸಬೇಕು. ಪೊಲೀಸರು ಬಲಪ್ರಯೋಗಿಸಲು ಅವಕಾಶ ನೀಡಬೇಡಿ. ಈ ಸಮಯ ಮೀರಿದ ನಂತರ ಸಾರ್ವಜನಿಕರು ಬೀದಿಗಿಳಿಯಬಾರದು ಎಂದರು.

ಕೃಷಿ, ವೈದ್ಯಕೀಯ ಸೇವೆ ಕೈಗಾರಿಕಾ ವಲಯಗಳಿಗೆ ಕರ್ಫ್ಯೂನಿಂದ ವಿನಾಯಿತಿ ನೀಡಲಾಗಿದೆ. ಆದರೆ ಕೈಗಾರಿಕಾ ವಲಯದ ಭಾಗವಾಗಿರುವ ಗಾರ್ಮೆಂಟ್ ವಲಯಕ್ಕೆ ಇದರಿಂದ ವಿನಾಯಿತಿ ಇಲ್ಲ. ರೈತರು ಬೆಳೆದ ಬೆಳೆ ಮತ್ತು ತರಕಾರಿಗಳನ್ನು ಬೆಳಗಿನ ನಾಲ್ಕು ಗಂಟೆಗಳ ಅವಧಿಯಲ್ಲಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅಂತರ ಜಿಲ್ಲೆ ಮತ್ತು ಅಂತರ ರಾಜ್ಯ ಸರಕು ಸಾಗಾಣಿಕೆಗೆ ನಿರ್ಬಂಧ ಹೇರುವುದಿಲ್ಲ. ಆದರೆ, ರಾಜ್ಯ ರಸ್ತೆ ಸಾರಿಗೆ ಹಾಗೂ ಖಾಸಗಿ ಬಸ್‌ಗಳು ರಸ್ತೆಗಿಳಿಯುವಂತಿಲ್ಲ. ರೈಲು ಮತ್ತು ವಿಮಾನದ ಸಂಚಾರ ಎಂದಿನಂತೆ ಕಾರ್ಯನಿರ್ವಹಿಸಲಿದೆ ಎಂದರು.

ಮಹಾರಾಷ್ಟ್ರಕ್ಕೂ ಮೀರಿ ಕರ್ನಾಟಕದಲ್ಲಿ ಸೋಂಕು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಇಂತಹ ಕ್ರಮ ಅನಿವಾರ್ಯವಾಗಿದೆ ಎಂದವರು (3ನೇ ಪುಟಕ್ಕೆ)

### ಮೇ 12ರವರೆಗೆ ಕೊರೊನಾ ತಡೆ ನಿರ್ಬಂಧ : ಮಾರ್ಗಸೂಚಿ ಪ್ರಕಟ

ಬೆಂಗಳೂರು, ಏ. 26 – ರಾಜ್ಯ ಸರ್ಕಾರ ಕೊರೊನಾ ತಡೆಗಾಗಿ ಹೊಸ ನಿರ್ಬಂಧಗಳ ಮಾರ್ಗಸೂಚಿ ಪ್ರಕಟಿಸಿದ್ದು, ಇವು ಇಂದು ಮಂಗಳವಾರ ರಾತ್ರಿ 9 ಗಂಟೆಯಿಂದ ಮೇ 12ರ ಬೆಳಿಗ್ಗೆ 6 ಗಂಟೆಯವರೆಗೆ ಅನ್ವಯವಾಗಲಿವೆ.

**ಈ ಅವಧಿಯಲ್ಲಿ ನಿಷೇಧಿತ ಚಟುವಟಿಕೆಗಳು** : ಶಾಲೆ, ಹೋಟೆಲ್, ಸಿನೆಮಾ, ಶಾಪಿಂಗ್ ಮಾಲ್, ಜಿಮ್, ಕ್ರೀಡಾ ಸಮುಚ್ಚಯ, ಸ್ವಿಮ್ಮಿಂಗ್ ಪೂಲ್, ಮನರಂಜನಾ ತಾಣಗಳು, ಕ್ಲಬ್, ಆಡಿಟೋರಿಯಂಗಳು, ಆಟೋ ರಿಕ್ಷಾ.

ಎಲ್ಲಾ ಸಾಮಾಜಿಕ, ಧಾರ್ಮಿಕ, ಕ್ರೀಡೆ, ಮನರಂಜನೆ, ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಸಮಾರಂಭ ಹಾಗೂ ಸಮಾವೇಶಗಳು.

**ತೆರೆದಿರುವ ಕಚೇರಿಗಳು** : ಆರೋಗ್ಯ, ವೈದ್ಯಕೀಯ ಶಿಕ್ಷಣ, ಪೊಲೀಸ್, ಹೋಂ ಗಾರ್ಡ್, ಬಂಧೀಖಾನೆ, ನಾಗರಿಕ ರಕ್ಷಣೆ, ಅಗ್ನಿಶಾಮಕ, ವಿಕೋಪ ನಿರ್ವಹಣೆ, ಕಂದಾಯ, ಜಿಲ್ಲಾ ಹಾಗೂ ಸಬ್ ರಿಜಿಸ್ಟ್ರಾರ್ ಕಚೇರಿಗಳು.

ವಿದ್ಯುತ್, ಜಲ ಹಾಗೂ ನೈರ್ಮಲ್ಯದಂತಹ ಅಗತ್ಯ ಸೇವೆ ಒದಗಿಸುವ ಕಚೇರಿಗಳು.

ನ್ಯಾಯಾಂಗದ ಕಚೇರಿಗಳು, ಕೊರೊನಾ ಸಂಬಂಧಿಸಿದ ಕೆಲಸ ನಿರ್ವಹಿಸುವ ಕಚೇರಿಗಳು, ಖಜಾನೆ ಕಚೇರಿ ಹಾಗೂ ಅರಣ್ಯ ಇಲಾಖೆಯ (3ನೇ ಪುಟಕ್ಕೆ)

### ಕರ್ಫ್ಯೂ ನಡುವೆ ಹೆಂಡಕ್ಕೆ ಅವಕಾಶ

ಬೆಂಗಳೂರು, ಏ. 26 – ಕರ್ಫ್ಯೂ ಸಂದರ್ಭದಲ್ಲೂ ನಿಗದಿತ ಅವಧಿಯಲ್ಲಿ ಆಲ್ಕೋಹಾಲ್ ಮಾರಾಟಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಮೇ 12 ರವರೆಗೆ ಕರ್ಫ್ಯೂ ಜಾರಿಯಲ್ಲಿರುವುದರಿಂದ ಬಾರ್ ಮತ್ತು ಮದ್ಯದಂಗಡಿಗಳಲ್ಲಿ ಬೆಳಿಗ್ಗೆ 6 ರಿಂದ 10 ಗಂಟೆಯವರೆಗೆ ಪಾರ್ಸೆಲ್ ತೆಗೆದುಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿದೆ. ಹೋಟೆಲ್ ರೆಸ್ಟೋರೆಂಟ್‌ಗಳು ಎಂದಿನಂತೆ ಕಾರ್ಯನಿರ್ವಹಿಸುವವಾದರೂ ಪಾರ್ಸೆಲ್‌ಗಳಿಗೆ ಮಾತ್ರ ಸೀಮಿತವಾಗಿರುತ್ತದೆ. 10 ಗಂಟೆಯ ನಂತರ ಬಾರ್‌ಗಳು ತೆರೆಯುವಂತಿಲ್ಲ. ನಿಗದಿತ ವೇಳೆಯಲ್ಲೇ ಆಹಾರ ಮತ್ತು ಹಾಲ್ಕೋಹಾಲ್‌ಗೆ ಅವಕಾಶ ಮಾಡಿಕೊಡಲಾಗಿದೆ.

### 18 ವರ್ಷ ಮೀರಿದವರಿಗೆ ಉಚಿತ ಲಸಿಕೆ

ಬೆಂಗಳೂರು, ಏ. 26 - 18 ರಿಂದ 44 ವರ್ಷ ದವರೆಗಿನ ನಾಗರಿಕರಿಗೆ ಉಚಿತ ಲಸಿಕೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಣೆ ಮಾಡಿದ್ದಾರೆ.

45 ವರ್ಷ ಮೇಲ್ಪಟ್ಟವರಿಗೆ ಈಗಾಗಲೇ ಕೇಂದ್ರ ಸರ್ಕಾರ ಉಚಿತ ಲಸಿಕೆ ನೀಡುತ್ತಿದೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮುಖ್ಯಮಂತ್ರಿಯವರು, ಯುವ ವಯಸ್ಸಿನ ನಾಗರಿಕರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಸಿಕೆ ನೀಡಲಾಗುವುದು. ಇದೇ 28 ರಿಂದ ಹೆಸರು ನೋಂದಾಯಿಸಿಕೊಂಡು, ಲಸಿಕೆ ಪಡೆದು ಕೊಳ್ಳಬೇಕೆಂದು ಮನವಿ ಮಾಡಿದರು. ರಾಜ್ಯ ಸರ್ಕಾರ 400 ಕೋಟಿ ರೂ. ವೆಚ್ಚದಲ್ಲಿ ಒಂದು ಕೋಟಿ ಲಸಿಕೆಗಳನ್ನು ರಾಜ್ಯ ಸರ್ಕಾರ ಖರೀದಿಸಲಿದೆ.

45 ವರ್ಷ ಮೇಲ್ಪಟ್ಟವರಿಗೆ ಎಂದಿನಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ ಕೇಂದ್ರ ಸರ್ಕಾರವೇ ಲಸಿಕೆ ನೀಡಲಿದೆ ಎಂದರು.

# ಮುಚ್ಚಿದ ವ್ಯಾಪಾರ, ಏರಿದ ದರ

## ಬಾಗಿಲು ಮುಚ್ಚಿಕೊಂಡೇ ಹೆಚ್ಚಿನ ದರಕ್ಕೆ ವಸ್ತುಗಳ ಮಾರಾಟ

## ವೀಕೆಂಡ್ ಕರ್ಫ್ಯೂ ನಂತರ ನಗರದಲ್ಲಿ ಜನರ ಓಡಾಟ ಹೆಚ್ಚಳ

ದಾವಣಗೆರೆ, ಏ.27- ವಾರಾಂತ್ಯದ ಕರ್ಫ್ಯೂಗೆ ಸ್ಪಂದಿಸಿದ್ದ ದೇವನಗರಿಯಲ್ಲಿ ಸೋಮವಾರ ಮುಂಜಾನೆ ವ್ಯಾಪಾರ ವಹಿವಾಟು ಮತ್ತೆ ಗರಿಗೆದರಿ, ಸಹಜ ಸ್ಥಿತಿಗೆ ಮರಳಿತ್ತು.

ಕೊರೊನಾ ಮಾರ್ಗಸೂಚಿಯಲ್ಲಿ ವ್ಯಾಪಾರ ನಡೆಸಲು ಅನುಮತಿ ಇದ್ದ ಕೃಷಿಗೆ ಸಂಬಂಧಿಸಿದ ಅಂಗಡಿಗಳು, ಔಷಧಿ ಅಂಗಡಿಗಳು, ಬೇಕರಿಗಳು, ದಿನಸಿ ಅಂಗಡಿಗಳು ಬಾಗಿಲು ತೆರೆದಿದ್ದವು. ಬೆಳ್ಳಿ-ಬಂಗಾರದ ಅಂಗಡಿ, ಬಟ್ಟೆ ಅಂಗಡಿಗಳು, ಚಪ್ಪಲಿ ಅಂಗಡಿ ಸೇರಿದಂತೆ ಮತ್ತಿತರೆ ಅಂಗಡಿಗಳು ಮುಚ್ಚಲ್ಪಟ್ಟಿದ್ದವು.

ಆದರೆ ಕೆಲವು ಮೊಬೈಲ್ ಅಂಗಡಿಗಳು ಅರ್ಧ ಬಾಗಿಲು ಮುಚ್ಚಿಕೊಂಡು ವ್ಯಾಪಾರ ನಡೆಸಿದರೆ, ಮತ್ತೆ ಕೆಲವರು ಪೂರ್ಣ ಬಾಗಿಲು ಮುಚ್ಚಿದ್ದರೂ ಹೊರಗಡೆ ಸಿಬ್ಬಂದಿಗಳಿದ್ದರು. ಗ್ರಾಹಕರಿಗೆ ಬೇಕಾದ ಮೊಬೈಲ್, ಚಾರ್ಜರ್, ಕೇಬಲ್ ಮುಂತಾದ ಬಿಡಿ ಭಾಗಗಳಿಗೆ ದುಪ್ಪಟ್ಟು ಹಣಕ್ಕೆ ಮೊದಲೇ (3ನೇ ಪುಟಕ್ಕೆ)

### ಮತ್ತೆ ಸಂಕಷ್ಟದಲ್ಲಿ ಬಡ ಜನತೆ

**ಮಧ್ಯಾಹ್ನದ ವೇಳೆಗೆ ಮಂಗಳವಾರ ಸಂಜೆಯಿಂದ ಮತ್ತೆ 14 ದಿನಗಳ ಕಾಲ ಕರ್ಫ್ಯೂ ಮುಂದುವರೆಯಲಿದೆ ಎಂಬ ಸುದ್ದಿ ಕೇಳಿದ ಜನತೆ ಮತ್ತೆ ಆತಂಕಕ್ಕೀಡಾದರು.**

**ಲಾಕ್‌ಡೌನ್ ನಿಂದ ನೆಲಕಚ್ಚಿದ್ದ ವ್ಯಾಪಾರ-ವಹಿವಾಟು ಈಗಷ್ಟೇ ಚೇತರಿಕೆ ಕಂಡಿದ್ದವು. ಮೂರ್ನಾಲ್ಕು ತಿಂಗಳುಗಳ ಕಾಲ ಕೆಲಸವಿಲ್ಲದವರು ದುಡಿಮೆಗೊಂದು ಮಾರ್ಗ ಕಂಡುಕೊಂಡಿದ್ದರು. ಆದರೆ ಇದೀಗ ಎರಡನೇ ಅಲೆ ಹೆಚ್ಚಾದ ಕಾರಣ ಮತ್ತೆ ಕರ್ಫ್ಯೂ ವಿಧಿಸಿರುವುದು ಬಡ ಹಾಗೂ ಮಧ್ಯಮ ವರ್ಗದ ಜನತೆಯನ್ನು ಚಿಂತೆಗೀಡು ಮಾಡಿದೆ.**

**ಸಾಲ ಮಾಡಿ ಸ್ವಂತ ಉದ್ಯಮ ಮಾಡುತ್ತಿರುವವರು, ಮಳಿಗೆ ಬಾಡಿಗೆ ಕಟ್ಟಿ ವ್ಯಾಪಾರ ಮಾಡುತ್ತಿದ್ದವರು ಮತ್ತೆ ಸಂಕಷ್ಟ** (3ನೇ ಪುಟಕ್ಕೆ)

# ಜಿಲ್ಲಾಸ್ಪತ್ರೆಯಲ್ಲಿ ವೆಂಟಿಲೇಟರ್ ಸಿಗದೇ ಕೊರೊನಾ ಸೋಂಕಿತೆ ಪರದಾಟ




ದಾವಣಗೆರೆ, ಏ.26- ನಗರದ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ವೆಂಟಿಲೇಟರ್ ಸಿಗದೇ ಕೊರೊನಾ ಸೋಂಕಿತೆಯೊಬ್ಬಳು ಪರದಾಡಿದ ಘಟನೆ ಇಂದು ರಾತ್ರಿ ನಡೆದಿದೆ.

ತಾಲ್ಲೂಕಿನ ಲೋಕಿಕೆರೆ ಗ್ರಾಮದ ಮಹಿಳೆಯೊಬ್ಬರಿಗೆ ಕೊರೊನಾ ಸೋಂಕು ತಗುಲಿದ್ದು, ಸೋಂಕಿತೆ ತೀವ್ರ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದಳು. ಈ ವೇಳೆ ಆಕೆಯನ್ನು ದಾವಣಗೆರೆಯ ಜಿಲ್ಲಾಸ್ಪತ್ರೆಗೆ ಕರೆ ತರಲಾಗಿತ್ತು. ಆದರೆ, ಜಿಲ್ಲಾಸ್ಪತ್ರೆಯಲ್ಲಿ ವೆಂಟಿಲೇಟರ್ ಸಮರ್ಪಕ ವ್ಯವಸ್ಥೆ ಇಲ್ಲದ ಕಾರಣ ಒಂದು ಗಂಟೆಯ ಕಾಲ ಆಂಬ್ಯುಲೆನ್ಸ್‌ನಲ್ಲೇ ಆಕೆ ಕಾಲ ಕಳೆಯಬೇಕಾಯಿತು.

ನಂತರ ದಾವಣಗೆರೆಯ ಹೈಟೆಕ್ ಆಸ್ಪತ್ರೆಗೆ ಕರೆದುಕೊಂಡು ಹೋದರೂ ಅಲ್ಲಿಯೂ ಬೆಡ್ ಫುಲ್ ಆಗಿದ್ದವು. ಬಳಿಕ, ರೋಗಿಯ ಸಂಬಂಧಿಯೊಬ್ಬರು ಮಾಜಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರಿಗೆ ಮನವಿ ಮಾಡಿದ್ದು, ಅವರು (3ನೇ ಪುಟಕ್ಕೆ)

### ತಾಂತ್ರಿಕ ಪರೀಕ್ಷೆಗಳ ಮುಂದೂಡಿಕೆ

ಬೆಂಗಳೂರು, ಏ.26 - ರಾಜ್ಯಾದ್ಯಂತ ಏಪ್ರಿಲ್ 27ರ ರಾತ್ರಿಯಿಂದ 14 ದಿನ 'ಕೊರೊನಾ ಕರ್ಫ್ಯೂ' ಜಾರಿ ಹಿನ್ನೆಲೆಯಲ್ಲಿ ನಾಳೆಯಿಂದ ನಡೆಯಬೇಕಿದ್ದ ಎಂಜಿನಿಯರಿಂಗ್ ಮತ್ತು ಡಿಪ್ಲೋಮಾ ಪರೀಕ್ಷೆಗಳನ್ನು ಮುಂದಕ್ಕೆ ಹಾಕಲಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಎಂಜಿನಿಯರಿಂಗ್, ಪಾಲಿಟೆಕ್ನಿಕ್‌ನ ಎಲ್ಲ ಪರೀಕ್ಷೆಗಳನ್ನು ಮುಂದೂಡಲಾಗಿದೆ. 2ನೇ ಅಲೆ ನಡುವೆ ನಾಡಿನ ಕ್ಷೇಮಕ್ಕಾಗಿ ಕೊರೊನಾ ಕರ್ಫ್ಯೂ ವಿಧಿಸಲಾಗಿದೆ ಎಂದು ತಿಳಿಸಿದ್ದಾರೆ. ಪರೀಕ್ಷೆಗಳು ಯಾವಾಗ ನಡೆಯುತ್ತವೆ ಎಂಬುದನ್ನು ಕೊರೊನಾ ಕರ್ಫ್ಯೂ ಮುಗಿದ ನಂತರ ತಿಳಿಸಲಾಗುವುದು ಎಂದು ಡಿಸಿಎಂ ಹೇಳಿದ್ದಾರೆ.


**ಜಮೀನು ಮಾರಾಟಕ್ಕಿದೆ**

ಹಿರೇಮೇಗಳಗೆರೆ ಸಮೀಪದಲ್ಲಿ 5 ಎಕರೆ, 53 ಸೆಂಟ್ಸ್ ಮತ್ತು 6 ಎಕರೆ, 55 ಸೆಂಟ್ಸ್ ಕಾರ್ನರ್ ಒಟ್ಟು ವಿಸ್ತೀರ್ಣ 12 ಎಕರೆ, 08 ಸೆಂಟ್ಸ್ ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ. 3 ಬೋರ್‌ಗಳಿವೆ. ಕಾಡಜ್ಜಿ ಕೃಷಿ ವಿಜ್ಞಾನ ಕೇಂದ್ರದಿಂದ 3 ಕಿಲೋಮಿಟರ್‌ದಲ್ಲಿದೆ. ದಾವಣಗೆರೆಯಿಂದ 10 ಕಿ.ಮೀ.ನಲ್ಲಿದೆ.

ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409



**MANIS DATA LINK**

BSNL Connecting India

# 446/1, Lawyer Road, K.B.Extension, Davanagere.

ನಿಮ್ಮಲ್ಲಿರುವ ಹಳೇ ಲ್ಯಾಂಡ್ ಲೈನ್ ನಂಬರ್‌ಗೆ ಇಂಟರ್‌ನೆಟ್ (FTTH) ಸೌಲಭ್ಯ ಕಲ್ಪಿಸಲಾಗುವುದು

**3300 GB**
**60 Mbps**

Super Speed Inter Net
24 Hrs. Unlimited free Calling on (Local + STD) to Any Network, **FTTH Plan**

**Starting Plan**
**Rs.599/-**
*Instalation Free*
**PH: 08192 295900**


# ಕೊರೊನಾ ಅಲೆಗೆ ಆಯೋಗ ಕಾರಣ

## ಮೇ 2ರ ಮತ ಎಣಿಕೆ ತಡೆಯುವುದಾಗಿ ಮದ್ರಾಸ್ ಹೈಕೋರ್ಟ್ ಎಚ್ಚರಿಕೆ

ಚೆನ್ನೈ, ಏ. 26 – ದೇಶದಲ್ಲಿ ಕಂಡು ಬಂದಿರುವ ಎರಡನೇ ಕೊರೊನಾ ಅಲೆಗೆ ಚುನಾವಣಾ ಆಯೋಗ ಏಕೈಕ ಕಾರಣ ಎಂದು ಹೇಳಿರುವ ಮದ್ರಾಸ್ ಹೈಕೋರ್ಟ್, ಆಯೋಗ ಅತ್ಯಂತ ಬೇಜವಾಬ್ದಾರಿ ಸಂಸ್ಥೆ. ಅದರ ಅಧಿಕಾರಿಗಳ ವಿರುದ್ಧ ಹತ್ಯೆ ಆರೋಪ ದಾಖಲಿಸಬೇಕು ಎಂದು ಹೇಳಿದೆ.

ರಾಜಕೀಯ ಪಕ್ಷಗಳು ಸಮಾವೇಶ ಹಾಗೂ ಸಭೆಗಳನ್ನು ನಡೆಸಲು ಅವಕಾಶ ನೀಡಿದ ಕಾರಣ ಕೊರೊನಾ ಹರಡಿದೆ ಎಂದು ನ್ಯಾಯಾಲಯ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಸಂಜಿಬ್ ಬ್ಯಾನರ್ಜಿ ಹಾಗೂ ನ್ಯಾಯಮೂರ್ತಿ ಸೆಂಥಿಲ್ ಕುಮಾರ್ ರಾಮಮೂರ್ತಿ ಅವರು ಈ ಕಠಿಣ ಮಾತುಗಳನ್ನು ಬಳಸಿದ್ದಾರೆ.

ಎ.ಐ.ಎ.ಡಿ.ಎಂ.ಕೆ. ಅಭ್ಯರ್ಥಿ ಹಾಗೂ ಸಾರಿಗೆ ಸಚಿವ ಎಂ.ಆರ್. ವಿಜಯಭಾಸ್ಕರ್ ಅವರು ಅರ್ಜಿಯೊಂದನ್ನು ದಾಖಲಿಸಿ, ಮೇ 2ರಂದು ನಡೆಯಲಿರುವ ಮತ ಎಣಿಕೆ ಕೊರೊನಾ ಶಿಷ್ಟಾಚಾರಗಳ ಪ್ರಕಾರ ನಡೆಯಬೇಕು ಎಂದು ಕೋರಿದ್ದರು.

ಕರೂರು ಕ್ಷೇತ್ರದಲ್ಲಿ ವಿಜಯಭಾಸ್ಕರ್ ಸೇರಿದಂತೆ 77 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಹೀಗಾಗಿ ಎಲ್ಲಾ ಏಜೆಂಟರಿಗೆ ಮತ ಎಣಿಕೆ ಹಾಲ್‌ನಲ್ಲಿ ಅವಕಾಶ ನೀಡುವುದು ಕಷ್ಟವಾಗುತ್ತದೆ ಎಂದು ಅರ್ಜಿದಾರರು ಹೇಳಿದ್ದರು. ಈ ಬಗ್ಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಚುನಾವಣಾ ಆಯೋಗದ ಪರವಾಗಿ ಹಾಜರಿದ್ದ ವಕೀಲರು ತಿಳಿಸಿದರು.

ಇದಕ್ಕೆ ಸಮಾಧಾನಗೊಳ್ಳದ ನ್ಯಾಯಾಲಯ, ನೀವು ರಾಜಕೀಯ ಪಕ್ಷಗಳು ಸಮಾವೇಶ ಹಾಗೂ ಸಭೆಗಳನ್ನು ನಡೆಸಲು ಅವಕಾಶ (2ನೇ ಪುಟಕ್ಕೆ)

# ಲಸಿಕೆ ಬೆಲೆ ಇಳಿಸಲು ಕೇಂದ್ರದ ಸೂಚನೆ

ನವದೆಹಲಿ, ಏ. 26 – ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಹಾಗೂ ಭಾರತ್ ಬಯೋಟೆಕ್‌ಗಳು ತಮ್ಮ ಲಸಿಕೆಗಳಿಗೆ ನಿಗದಿ ಪಡಿಸಿರುವ ಬೆಲೆ ಹೆಚ್ಚಾಗಿದೆ ಎಂದು ಹಲವೆಡೆಗಳಿಂದ ಬಂದಿರುವ ಟೀಕೆಗಳ ಹಿನ್ನೆಲೆಯಲ್ಲಿ, ಬೆಲೆ ಇಳಿಕೆ ಮಾಡುವಂತೆ ಕಂಪನಿಗಳಿಗೆ ಕೇಂದ್ರ ಸರ್ಕಾರ ಕೇಳಿದೆ.




ಕೇಂದ್ರ ಸಂಪುಟ ಕಾರ್ಯದರ್ಶಿ ರಾಜೀವ್ ಗೌಬ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಲಸಿಕೆಯ ಬೆಲೆ ಕುರಿತು ಚರ್ಚಿಸಲಾಗಿದೆ. ಎರಡೂ ಕಂಪನಿಗಳು ತಮ್ಮ ಲಸಿಕೆಗಳ ಬೆಲೆ ಪರಿಷ್ಕರಿಸುವ ನಿರೀಕ್ಷೆ ಇದೆ.

ಹೈದರಾಬಾದ್‌ನ ಭಾರತ್ ಬಯೋಟೆಕ್ ಕಂಪನಿ ತನ್ನ ಲಸಿಕೆಯಾದ ಕೊವ್ಯಾಕ್ಸಿನ್‌ಗೆ 600 ರೂ.ಗಳಿಂದ 1,200 ರೂ.ಗಳ ಬೆಲೆ ನಿಗದಿ ಪಡಿಸಿತ್ತು. ಪುಣೆಯ ಸೆರಮ್ ತನ್ನ ಕೋವಿಶೀಲ್ಡ್ ಲಸಿಕೆಗೆ 400 ರೂಗಳಿಂದ 600 ರೂ.ಗಳ ಬೆಲೆ ನಿಗದಿ ಪಡಿಸಿದೆ.


# ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥

**ಶ್ರೀ ಮಾಳಗಿ ನಿಂಗಪ್ಪರ**
**ಎಂ.ಬಿ. ಬಸವರಾಜಪ್ಪ**
ನಿಟುವಳ್ಳಿ

ಜನನ : 1.06.1958 ನಿಧನ : 19.04.2021

ಬಡತನಕ್ಕೆ ಬಗ್ಗದೆ ಸಿರಿತನಕ್ಕೆ ಹಿಗ್ಗದೆ
ನುಡಿ ಚೆನ್ನ ನಡೆ ಚೆನ್ನವಾಗಿ ಚೆನ್ನದಂತಹ ಬದುಕು ನಡೆಸಿ
ಮಾತು ಬೆಳ್ಳಿ, ಮೌನ ಬಂಗಾರವೆಂಬಂತೆ
ಮೌನದ ಮರಣವನ್ನಪ್ಪಿದ
ಎಮ್ಮ ಚೇತನಕ್ಕೆ ನಮ್ಮೆಲ್ಲರ ನಮನ

ದಿ. ಶ್ರೀಮತಿ ಹನುಮಮ್ಮ ದಿ.ಶ್ರೀ ಮಾಳಗಿ ನಿಂಗಪ್ಪರ ಭೀಮಪ್ಪನವರ ಸೊಸೆಯಾದ
**ಶ್ರೀಮತಿ ಅನುಸೂಯಮ್ಮ**
"ಶ್ರೀ ಆಂಜನೇಯ ನಿವಾಸ" ಕಾಲೇಜ್ ರಸ್ತೆ, ನಿಟುವಳ್ಳಿ, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 19.04.2021ನೇ ಸೋಮವಾರ, ಬೆಳಗ್ಗೆ 11.00 ಗಂಟೆಗೆ
ನನ್ನ ಪೂಜ್ಯ ಪತಿಯವರಾದ
**ಶ್ರೀ ಮಾಳಗಿ ನಿಂಗಪ್ಪರ ಎಂ.ಬಿ. ಬಸವರಾಜಪ್ಪ**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ವೈಕುಂಠ ಸಮಾರಾಧನೆಯನ್ನು**
ದಿನಾಂಕ 27.04.2021 ನೇ ಮಂಗಳವಾರ ಬೆಳಿಗ್ಗೆ 9.00 ರಿಂದ 12.00 ಗಂಟೆಗೆ ಮೃತರ ಸ್ವಗೃಹ, ನಿಟುವಳ್ಳಿ, ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು
**ಶ್ರೀಮತಿ ಅನುಸೂಯಮ್ಮ ಮತ್ತು ಮಕ್ಕಳು,**
**ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು**
**ಮಾಳಗಿ ವಂಶಸ್ಥರು ಹಾಗೂ ಬಂಧು-ಮಿತ್ರರು.**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.
ಮಾಸ್ಕ್ ಧರಿಸುವುದು ಹಾಗೂ ಸಾಮಾಜಿಕ ಅಂತರ ಕಾಪಾಡುವುದು ಕಡ್ಡಾಯ

# ಹಂದಿ ಸಾಕಾಣಿಕೆ : ಜಮೀನು ಮಂಜೂರಾತಿಗೆ ವಿರೋಧ



## ಆನಗೋಡು ಹೋಬಳಿ ಹೊಸಹಳ್ಳಿ ಗ್ರಾಮಸ್ಥರ ಪ್ರತಿಭಟನೆ

ದಾವಣಗೆರೆ, ಏ.26- ತಾಲ್ಲೂಕಿನ ಆನಗೋಡು ಹೋಬಳಿ ಹೊಸಹಳ್ಳಿ ಗ್ರಾಮದ ಗೋಮಾಳದ ಜಮೀನಿನಲ್ಲಿ ಹಂದಿ ಸಾಕಾಣಿಕೆಗೆ ಜಮೀನು ನೀಡುತ್ತಿರುವುದನ್ನು ವಿರೋಧಿಸಿ ಗ್ರಾಮಸ್ಥರು ಇಂದು ಬೆಳಗ್ಗೆ ಟೈರು ಸುಟ್ಟು ಪ್ರತಿಭಟಿಸುವ ಮುಖೇನ ಆಕ್ರೋಶ ವ್ಯಕ್ತಪಡಿಸಿದರು.

ವರಾಹ ಶಾಲೆ ಆರಂಭಿಸಲು ಉದ್ದೇಶಿಸಿರುವ ಗ್ರಾಮದ ರಿ.ಸ.ನಂ.35ರ ಗೋಮಾಳ ಜಮೀನಿನಲ್ಲಿ ಜಮಾಯಿಸಿದ್ದ ಹೊಸಹಳ್ಳಿ, ಹೆಬ್ಬಾಳು, ಗುಡಾಳು-ಗುಮ್ಮನೂರು ಗ್ರಾಮಸ್ಥರು, ಮಕ್ಕಳು, ಮಹಿಳೆಯರು, ಹಿರಿಯರು, ದಾವಣಗೆರೆ ನಗರದ ಹಂದಿಗಳನ್ನು ವರಾಹ ಶಾಲೆಯನ್ನು ಸ್ಥಾಪಿಸುವ ಮೂಲಕ ಇಲ್ಲಿ ಬಿಟ್ಟರೆ ತಮಗೆ ಸಂಕಷ್ಟ ಎದುರಾಗಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಗೋಮಾಳದಲ್ಲಿ ಸುಮಾರು 50 ವರ್ಷಗಳಿಂದ ಬಡ ಲಂಬಾಣಿ ಜನಾಂಗದವರು ಉಳುಮೆ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ದಾವಣಗೆರೆ ನಗರದಿಂದ ಸುಮಾರು 25 ಕಿ.ಮೀ ದೂರವಿರುವ ಗ್ರಾಮಕ್ಕೆ ಬಂದು ಹಂದಿ ಸಾಕಲು ಮಾಲೀಕರಿಗೆ ಜಿಲ್ಲಾಧಿಕಾರಿಗಳು, ತಹಶೀಲ್ದಾರ್ ಜಮೀನು ಮಂಜೂರಾತಿ ನೀಡುತ್ತಿರುವುದು ಸರಿಯಲ್ಲ. ಹೊಸಹಳ್ಳಿಯಲ್ಲಿ 37 ಎಕರೆ ಸರ್ಕಾರಿ ಗೋಮಾಳದ ಜಾಗದಲ್ಲಿ 5 ಎಕರೆಯನ್ನು ಗ್ರಾಮದ ನಿವೇಶನ ರಹಿತರಿಗೆ ನೀಡಲಾಗಿದೆ. 4 ದಶಕಗಳಿಂದ ನಾವು ಅಲ್ಲಿಯೇ ಉಳುಮೆ ಮಾಡಿಕೊಂಡಿದ್ದೇವೆ. ಚಿಕ್ಕೇನಹಳ್ಳಿ ಗ್ರಾಮಸ್ಥರಿಗೆ ಇದೇ ಗೋಮಾಳದಲ್ಲಿ 4 ಎಕರೆ ನಿವೇಶನಕ್ಕೆ ನೀಡಲಾಗಿದೆ. ವಿದ್ಯುತ್ ಸ್ಥಾವರ ನಿರ್ಮಿಸಲು 2 ಎಕರೆ ಜಾಗ ಕೊಡಲಾಗಿದೆ. ಪಕ್ಕದಲ್ಲೇ ಕೆರೆ ಇದ್ದು, ಕೆರೆಯೂ ಒತ್ತುವರಿಯಾಗಿದೆ. ಇಲ್ಲಿ ವರಹಾ ಶಾಲೆ ಆರಂಭಿಸಲು ನಮ್ಮ ತೀವ್ರ ವಿರೋಧವಿದೆ ಎಂದು ಪ್ರತಿಭಟನಾಕಾರರು ಆಕ್ಷೇಪಿಸಿದರು.

ವರಾಹ ಶಾಲೆ ಸ್ಥಾಪನೆ ವಿರುದ್ಧ ಬೀದಿಗಿಳಿದು ಹೋರಾಟ ನಡೆಸುವ ಜೊತೆಗೆ ನ್ಯಾಯಾಂಗ ಹೋರಾಟವನ್ನೂ ಮಾಡುತ್ತೇವೆ. ಈ ಗೋಮಾಳ ಜಮೀನು ಬಿಟ್ಟರೆ ನಮಗೆ ಜೀವನಾಧಾರವೇ ಇಲ್ಲ. ಹೊಸಹಳ್ಳಿ ಸುತ್ತಮುತ್ತಲಿನ ಗ್ರಾಮಗಳ ಜಾನುವಾರುಗಳನ್ನು ಮೇಯಿಸಲು ಇದೇ ಗೋಮಾಳಕ್ಕೆ ಬರುತ್ತೇವೆ. ವರಾಹ ಶಾಲೆ ಸ್ಥಾಪಿಸಿದರೆ ನಮ್ಮ ಜಾನುವಾರುಗಳನ್ನು ಎಲ್ಲಿ ಮೇಯಿಸಬೇಕು, ಇಲ್ಲಿ ವರಾಹ ಶಾಲೆ ಮಾಡಿದರೆ ಪಕ್ಕದಲ್ಲೇ ನಮ್ಮೆಲ್ಲರ ನಿವೇಶನ ಇವೆ. ಮಕ್ಕಳು, ಮಹಿಳೆಯರು, ವಯೋವೃದ್ಧರು ಹಂದಿ ದಾಳಿಗೆ ತುತ್ತಾಗುವುದಿಲ್ಲವೇ? ಹಂದಿಯಿಂದ ಬರುವ ಕಾಯಿಲೆಗಳಿಗೆ ನಾವು, ನಮ್ಮ ಕುಟುಂಬ ತುತ್ತಾಗುವುದಿಲ್ಲವೇ? ಆಡಳಿತ ನಡೆಸುವವರೂ ನಮ್ಮ ಸ್ಥಾನದಲ್ಲಿದ್ದು ಯೋಚಿಸಲಿ ಎಂದು ಅಳಲಿಟ್ಟರು.

ಸರ್ಕಾರ, ಜಿಲ್ಲಾಡಳಿತಕ್ಕೆ ಅಷ್ಟೊಂದು ಕಾಳಜಿ ಇದ್ದರೆ ಪರಿಶಿಷ್ಟ ಜಾತಿ ಜನರೇ ಹೆಚ್ಚಾಗಿರುವ ಈ ಗೋಮಾಳದಲ್ಲೇ ಮೊರಾರ್ಜಿ ದೇಸಾಯಿ ವಸತಿಯುತ ಶಾಲೆ ಸ್ಥಾಪಿಸಲಿ. ಮಕ್ಕಳ ಶಿಕ್ಷಣಕ್ಕೆ ಪೂರಕವಾದ ಸೌಲಭ್ಯ ಕಲ್ಪಿಸಲಿ. ನಮ್ಮ ಗ್ರಾಮಕ್ಕೆ ಸ್ಮಶಾನ ಇಲ್ಲ. ರುದ್ರಭೂಮಿಗೆ ಜಾಗ ಕೊಡಲಿ. ಇದೇ ಗೋಮಾಳಕ್ಕೆ ಹೊಂದಿಕೊಂಡಿರುವ ಕೆರೆಗೆ ಚೆಕ್ ಡ್ಯಾಂ ನಿರ್ಮಿಸಿ, ಅಂತರ್ಜಲ ಹೆಚ್ಚಿಸಲು ಕ್ರಮ ಕೈಗೊಳ್ಳಲಿ. ಈ ಬಗ್ಗೆ ಮಂಗಳವಾರ ಇಡೀ ಗ್ರಾಮಸ್ಥರು ದಾವಣಗೆರೆಯಲ್ಲಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ, ಮನವಿ ಅರ್ಪಿಸಲಿದ್ದೇವೆ. ನಮ್ಮ ಮನವಿಗೆ ಸ್ಪಂದಿಸದಿದ್ದರೆ ಕಾನೂನು ಹೋರಾಟಕ್ಕೂ ಮುಂದಾಗುತ್ತೇವೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಗ್ರಾಮ ಪಂಚಾಯತ್ ಸದಸ್ಯ ಟಿ. ಕುಮಾರ ನಾಯ್ಕ, ಗ್ರಾಮದ ಮುಖಂಡರಾದ ಶಾಂತಕುಮಾರ್, ಗೋವಿಂದ ನಾಯ್ಕ, ಅರುಣ್ ಸಿಂಗ್, ಪರಮೇಶ, ಕೇಶವ ನಾಯ್ಕ, ಕಿರಣಕುಮಾರ, ಪ್ರದೀಪ, ಚಿದಾನಂದ, ರುದ್ರೇಶ ನಾಯ್ಕ, ಗೋವಿಂದ ನಾಯ್ಕ, ಶಿವಕುಮಾರ, ಅಣ್ಣಪ್ಪ, ನಾಗರಾಜ, ತಾರಾಬಾಯಿ, ಪ್ರೇಮಾ, ಬೇಂದಿಬಾಯಿ, ಧನಂಜಯ ನಾಯ್ಕ, ಉಮೇಶ, ಅರ್ಜುನ್, ಹರೀಶ ಕುಮಾರ, ಬಸವರಾಜ ಸೇರಿದಂತೆ ಇತರರು ಇದ್ದರು.

# ಹರಿಹರ: ಎಂದಿನಂತೆ ವ್ಯಾಪಾರ ವಹಿವಾಟು



ಹರಿಹರ, ಏ.26- ನಗರದಲ್ಲಿ ಇಂದು ವ್ಯಾಪಾರಸ್ಥರು ದಿನನಿತ್ಯ ವ್ಯಾಪಾರ ವಹಿವಾಟು ಮಾಡುವಂತೆ ಮಾಡಿದ್ದು ಮಾರುಕಟ್ಟೆಯಲ್ಲಿ ಕಂಡುಬಂತು.

ಸರ್ಕಾರದ ಆದೇಶದಂತೆ ಇಂದು ಅಂದರೆ ಹೋಟೆಲ್, ತರಕಾರಿ, ಬಾರ್, ಕಟ್ಟಡ ನಿರ್ಮಾಣ ಸಾಮಗ್ರಿಗಳು, ಇವುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅಂಗಡಿ ಮುಂಗಟ್ಟನ್ನು ಬಂದ್ ಮಾಡುವಂತೆ ಆದೇಶ ಇದ್ದರೂ ಸಹ ಕೆಲವೊಂದು ಅಂಗಡಿಗಳು ಮುಚ್ಚಿದ್ದು ಬಿಟ್ಟರೆ ಉಳಿದ ಎಲ್ಲಾ ಅಂಗಡಿಯಲ್ಲಿ ದಿನ ನಿತ್ಯವೂ ನಡೆಯುವ ರೀತಿಯೇ ವ್ಯಾಪಾರ ವಹಿವಾಟು ಬೆಳಗ್ಗೆಯಿಂದ ಸಂಜೆಯವರೆಗೆ ನಡೆಯಿತು.

ಹೋಟೆಲ್‌ನವರು ಹಾಗೂ ಕೆಲವೊಂದು ಬಾರ್‌ಗಳಲ್ಲಿ ಪಾರ್ಸಲ್ ನೀಡಲು ಮುಂದಾದರೆ ಉಳಿದ ಬಾರ್‌ಗಳಲ್ಲಿ ಎಂದಿನಂತೆ ವ್ಯಾಪಾರ ವಹಿವಾಟು ಮಾಡಿದರು. ಬಟ್ಟೆ ಅಂಗಡಿಯವರು ಅರ್ಧ ಬಾಗಿಲು ತೆಗೆದುಕೊಂಡು ವ್ಯಾಪಾರ ಮಾಡಿದರು. ತರಕಾರಿ ಮಾರುಕಟ್ಟೆಯನ್ನು ಗಾಂಧಿ ಮೈದಾನದಲ್ಲಿ ವ್ಯವಸ್ಥೆ ಮಾಡಿದ್ದರಿಂದ ದೊಡ್ಡ ಬೀದಿಯ ತರಕಾರಿ ಮಾರುಕಟ್ಟೆ ಸಂಪೂರ್ಣವಾಗಿ ಬಂದ್ ಆಗಿರಲಿಲ್ಲ. ಅಲ್ಲಿ ಸಹ ಕೆಲವೊಂದು ಅಂಗಡಿಯಲ್ಲಿ ತರಕಾರಿ ಮಾರುತ್ತಿದ್ದರು.

ಎಂದಿನಂತೆ ಸಾರ್ವಜನಿಕರು ಮಾಸ್ಕ್ ಇಲ್ಲದೆ ಓಡಾಡುತ್ತಿದ್ದರೂ, ಇವರನ್ನು ಕೇಳುವವರು ಯಾರೂ ಇರಲಿಲ್ಲ. ಬ್ಯಾಂಕ್‌ಗಳಲ್ಲಿ ಎಂದಿನಂತೆ ವ್ಯವಹಾರ ಚಾಲ್ತಿಯಲ್ಲಿತ್ತು. ಟ್ಯಾಕ್ಸಿ, ಆಟೋ, ಬಸ್ ಸಂಚಾರ ಎಂದಿನಂತೆ ಇತ್ತು.

ನಗರಸಭೆಯ ಒಳಗಡೆ ಯಾವುದೇ ವ್ಯಕ್ತಿಗಳಿಗೆ ಬರುವುದಕ್ಕೆ ಆಸ್ಪದ ನೀಡದೆ ಸಾರ್ವಜನಿಕರಿಗೆ ಹೊರಗಡೆ ನಿಲ್ಲಿಸಿ, ಅವರ ಕೆಲಸವನ್ನು ಮಾಡಿಕೊಡಲಾಗುತ್ತಿತ್ತು. ದೇವಸ್ಥಾನಗಳು ಮಾತ್ರ ಬೆಳಿಗ್ಗೆ ಪೂಜೆ ಸಲ್ಲಿಸಿ ನಂತರದಲ್ಲಿ ಬಾಗಿಲು ಹಾಕಿದವು. ಫುಟ್‌ಪಾತ್‌ನ ಎಗ್‌ರೈಸ್, ಟೀ ಸ್ಟಾಲ್ಸ್, ತಿಂಡಿಗಾಡಿಗಳು ಬಂದ್ ಆಗಿದ್ದವು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರ ಬಳಿ ಬಂಗಾರದ ಅಂಗಡಿಯ ಮಾಲೀಕರು ಆಗಮಿಸಿ, ನಮಗೆ ವ್ಯಾಪಾರ ಮಾಡಲು ಅನುಮತಿ ನೀಡಬೇಕೆಂದು ಮನವಿ ಮಾಡಿಕೊಂಡಿದ್ದಕ್ಕೆ ತಹಶೀಲ್ದಾರವರು ಅನುಮತಿ ನೀಡಿದ್ದಾರೆ. ಉಳಿದ ಎಲ್ಲಾ ವ್ಯಾಪಾರಸ್ಥರು ತಮ್ಮ ತಮ್ಮ ಅಂಗಡಿ ಮುಂಗಟ್ಟುಗಳನ್ನು ತೆರೆದುಕೊಂಡು ವ್ಯಾಪಾರ ವಹಿವಾಟು ಮಾಡುವುದಕ್ಕೆ ಮುಂದಾಗಿದ್ದರ ಪರಿಣಾಮವಾಗಿ, ಇಂದು ಎಂದಿನಂತೆ ವ್ಯಾಪಾರ ವಹಿವಾಟು ನಡೆಯುವುದಕ್ಕೆ ದಾರಿ ಆಗಿದೆ ಎನ್ನಲಾಗಿದೆ.

ನಂತರ ಮಧ್ಯಾಹ್ನದ ಮೇಲೆ ಪೌರಾಯುಕ್ತೆ ಎಸ್. ಲಕ್ಷ್ಮಿ ಮತ್ತು ಕೆಲವು ಪೊಲೀಸ್ ಸಿಬ್ಬಂದಿಗಳು ಸೇರಿ ಮತ್ತೆ ಸರ್ಕಾರದ ಮಾರ್ಗಸೂಚಿ ಅನ್ವಯದಂತೆ ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿಸಿದರು.

# ವಾಟ್ಸ್‌ಅಪ್ : ಅಡ್ಮಿನ್ ಹೊಣೆ ಅಲ್ಲ



ಮುಂಬೈ, ಏ. 26 – ವಾಟ್ಸ್‌ಆಪ್ ಗ್ರೂಪ್‌ನ ಸದಸ್ಯರೊಬ್ಬರು ಆಕ್ಷೇಪಾರ್ಹ ಪೋಸ್ಟ್ ಪ್ರಕಟಿಸಿದರೆ ಅದಕ್ಕಾಗಿ ಗ್ರೂಪ್‌ನ ಅಡ್ಮಿನ್ ಹೊಣೆಗಾರನಲ್ಲ ಎಂದು ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠ ತೀರ್ಪು ನೀಡಿದೆ.

33 ವರ್ಷದ ವ್ಯಕ್ತಿಯ ವಿರುದ್ಧ ದಾಖಲಿಸಲಾಗಿದ್ದ ಲೈಂಗಿಕ ಪೀಡನೆ ಪ್ರಕರಣದ ವಿಚಾರಣೆ ನಡೆಸುವ ಸಂದರ್ಭದಲ್ಲಿ ಈ ತೀರ್ಪು ನೀಡಲಾಗಿದೆ.

ನ್ಯಾಯಮೂರ್ತಿಗಳಾದ ಝಡ್. ಎ. ಹಕ್ ಹಾಗೂ ಎ.ಬಿ. ಬೋರ್ಕರ್ ಅವರನ್ನು ಒಳಗೊಂಡ ಪೀಠ ಈ ತೀರ್ಪು ನೀಡಿದ್ದು, ವಾಟ್ಸ್‌ಅಪ್ ಗ್ರೂಪ್ ಅಡ್ಮಿನ್ ಸೀಮಿತ ಅಧಿಕಾರ ಹೊಂದಿರುತ್ತಾನೆ. ಆತ ಸದಸ್ಯರನ್ನು ಸೇರ್ಪಡೆ ಮಾಡಬಹುದು, ಇಲ್ಲವೇ ಕಿತ್ತು ಹಾಕಬಹುದು. ಗ್ರೂಪ್ ಸದಸ್ಯರ ಸೆನ್ಸಾರ್ ಮಾಡುವ ಅಧಿಕಾರ ಇರುವುದಿಲ್ಲ ಎಂದು ಹೇಳಿದೆ.

2016ರಲ್ಲಿ ವಾಟ್ಸ್ ಆಪ್ ಗ್ರೂಪ್ ಒಂದರ ಅಡ್ಮಿನ್ ಆಗಿದ್ದ ಕಿಶೋರ್ ತರೋನೆ ವಿರುದ್ಧ ಪೊಲೀಸರು ಲೈಂಗಿಕ ಪೀಡನೆ ಪ್ರಕರಣ ದಾಖಲಿಸಿದ್ದರು. ಅದನ್ನು ರದ್ದುಗೊಳಿಸುವಂತೆ ತರೋನೆ ಹೈಕೋರ್ಟ್ ಮೊರೆ ಹೋಗಿದ್ದರು.

ಅಡ್ಮಿನ್ ಆಗಿದ್ದ ತರೋನೆ, ತನ್ನ ಗ್ರೂಪ್ ಸದಸ್ಯರೊಬ್ಬರು ಇನ್ನೊಬ್ಬ ಮಹಿಳಾ ಸದಸ್ಯೆ ವಿರುದ್ಧ ಬಳಸಿದ ಕೀಳು ಹಾಗೂ ಅಸಭ್ಯ ಭಾಷೆ ತಡೆಯಲು ವಿಫಲರಾಗಿದ್ದರು ಎಂದು ಆರೋಪಿಸಲಾಗಿತ್ತು. ಅಲ್ಲದೇ ಆಕ್ಷೇಪಾರ್ಹ ವರ್ತನೆ ತೋರಿದ ಸದಸ್ಯನನ್ನು ಗ್ರೂಪ್‌ನಿಂದ ಹೊರ ಹಾಕಿರಲಿಲ್ಲ ಮತ್ತು ಕ್ಷಮೆ ಯಾಚಿಸುವಂತೆ ಕೇಳಿರಲೂ ಇಲ್ಲ ಎಂದು ದೂರಲಾಗಿತ್ತು.

ಆದರೆ, ವಾಟ್ಸ್ ಆಪ್ ಸದಸ್ಯ ರೊಬ್ಬರು ಎಸಗಿದ ಕೃತ್ಯಕ್ಕೆ ಅಡ್ಮಿನ್ ಹೊಣೆಗಾರನಲ್ಲ ಎಂದು ಹೇಳಿರುವ ಹೈಕೋರ್ಟ್, ಗ್ರೂಪ್ ಸೃಷ್ಟಿಸುವವರು ಹಾಗೂ ಸದಸ್ಯರನ್ನು ಸೇರಿಸುವ ಇಲ್ಲವೇ ಡಿಲೀಟ್ ಮಾಡುವವರನ್ನು ಅಡ್ಮಿನ್ ಎಂದು ಗುರುತಿಸಲಾಗುತ್ತದೆ. ಪ್ರತಿ ಗ್ರೂಪ್‌ನಲ್ಲಿ ಒಬ್ಬರು ಇಲ್ಲವೇ ಹಲವರು ಅಡ್ಮಿನ್ ಇರುತ್ತಾರೆ. ಇವರಿಗೆ ಸೀಮಿತ ಅಧಿಕಾರ ಮಾತ್ರ ಇರುತ್ತದೆ ಎಂದು ನ್ಯಾಯಾಲಯ ಹೇಳಿದೆ.

ಗ್ರೂಪ್ ರೂಪುಗೊಂಡ ನಂತರ ಗುಂಪಿನ ಇತರೆ ಸದಸ್ಯರಿಗಿರುವಷ್ಟೇ ಅಧಿಕಾರ ಅಡ್ಮಿನ್‌ಗೆ ಇರುತ್ತದೆ. ಸದಸ್ಯರನ್ನು ಸೇರ್ಪಡೆ ಮಾಡುವುದು ಇಲ್ಲವೇ ತೆಗೆದು ಹಾಕುವುದು ಮಾತ್ರ ಹೆಚ್ಚುವರಿ ಅಧಿಕಾರ ಎಂದು ನ್ಯಾಯಾಲಯ ತಿಳಿಸಿದೆ.

ಈ ಗ್ರೂಪ್‌ನಲ್ಲಿ ಯಾವುದೇ ವ್ಯಕ್ತಿ ಪ್ರಕಟಿಸುವ ಮಾಹಿತಿ ಕಾನೂನು ರೀತ್ಯ ಆಕ್ಷೇಪಾರ್ಹವಾಗಿದ್ದರೆ, ಆ ಸದಸ್ಯನ ವಿರುದ್ಧ ಕ್ರಮ ತೆಗೆದುಕೊಳ್ಳಬಹುದು ಎಂದು ನ್ಯಾಯಾಲಯ ಹೇಳಿದೆ. ತರೋನೆ ವಿರುದ್ಧ ದಾಖಲಿಸಲಾಗಿದ್ದ ಎಫ್.ಐ.ಆರ್. ತಳ್ಳಿ ಹಾಕಿರುವ ಹೈಕೋರ್ಟ್, ಅವರನ್ನು ಆರೋಪ ಮುಕ್ತಗೊಳಿಸಿದೆ.

## ಇಂದು ವಿದ್ಯುತ್ ವ್ಯತ್ಯಯ

ಶಿವಕುಮಾರಸ್ವಾಮಿ ಬಡಾವಣೆ 1 ಮತ್ತು 2ನೇ ಹಂತ, ಹದಡಿ ರಸ್ತೆ, ಸೆಂಟ್‌ಜಾನ್ ಸ್ಕೂಲ್, ಐಟಿಐ ಕಾಲೇಜು, ರಿಂಗ್ ರಸ್ತೆ, ಶ್ರೀನಿವಾಸ ನಗರ, ತರಳಬಾಳು ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಪೂರೈಕೆ ಇರುವುದಿಲ್ಲ.

# ಹರಪನಹಳ್ಳಿ ತಾ.ನಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ



ಹರಪನಹಳ್ಳಿ, ಏ.26- ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದಿಂದ ತಾಲ್ಲೂಕಿನ ನಿಟ್ಟೂರು, ಬಸಾಪುರ, ತಾವರಗೊಂದಿ ಗ್ರಾಮಗಳಲ್ಲಿ ಶಾಸಕ ಜಿ. ಕರುಣಾಕರ ರೆಡ್ಡಿ ಸಿಸಿ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ ನಂತರ ಚಿಗಟೇರಿ ಗ್ರಾಮದಲ್ಲಿ ಶುಶ್ರೂಷಕಿಯರ (ಸ್ಟಾಫ್ ನರ್ಸ್) ನೂತನ ಕಟ್ಟಡ ಉದ್ಘಾಟಿಸಿದರು.

ನಿಟ್ಟೂರು ಗ್ರಾಮದಿಂದ ತಾವರಗೊಂದಿ ಗ್ರಾಮದವರೆಗೆ ಕೆ.ಕೆ.ಆರ್.ಡಿ.ಬಿ ಯೋಜನೆಯಡಿಯಲ್ಲಿ 135.00 ಲಕ್ಷಗಳಲ್ಲಿ 2 ಕಿಮೀ ಉದ್ದದ ಸಿಸಿ ರಸ್ತೆ ಕಾಮಗಾರಿ ಹಾಗೂ ತಾವರಗೊಂದಿಯಿಂದ ನಿಟ್ಟೂರು, ಬಸಾಪುರ ಗ್ರಾಮದವರೆಗೆ ಕೆ.ಕೆ.ಆರ್.ಡಿ.ಬಿ ಯೋಜನೆಯಡಿಯಲ್ಲಿ ಅಂದಾಜು ಮೊತ್ತ 275.00 ಲಕ್ಷಗಳಲ್ಲಿ 4 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಚಿಗಟೇರಿ ಗ್ರಾಮದಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಯೋಜನೆಯಡಿಯಲ್ಲಿ 35.00 ಲಕ್ಷಗಳಲ್ಲಿ ಶುಶ್ರೂಷಕಿಯರ (ಸ್ಟಾಫ್ ನರ್ಸ್) ಗಳಿಗೆ ವಸತಿ ಗೃಹದ ನೂತನ ಕಟ್ಟಡ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದ ಎಇಇ ಸತೀಶ್ ಗೌಡ ಪಾಟೀಲ್, ಜೆ.ಇ ಬಸವರಾಜ್, ಎ.ಇ ಕಿರಣ್, ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ್, ಜಿಲ್ಲಾ ಬಿಜೆಪಿ ಎಸ್‌ಟಿ ಘಟಕದ ಕಾರ್ಯದರ್ಶಿ ಆರ್. ಲೋಕೇಶ್, ಚಿಗಟೇರಿ ಗ್ರಾ.ಪಂ ಅಧ್ಯಕ್ಷೆ ಶಾರದಮ್ಮ, ಮುಖಂಡರಾದ ಎಂ.ಪಿ ನಾಯ್ಕ್, ಬಾಗಳಿ ಕೊಟ್ರೇಶಪ್ಪ, ರಾಘವೇಂದ್ರ ಶೆಟ್ಟಿ, ಯು.ಪಿ ನಾಗರಾಜ್, ಸಂತೋಷಕುಮಾರ್, ನೀಲಗುಂದ ರೆಡ್ಡಿ ಸಿದ್ದೇಶ್, ಆನಂದಗೌಡ, ನಾಗರಾಜ್, ಐ.ಮಂಜುನಾಥ್, ಕಿರಣ್ ಕುಮಾರ್, ನವೀನ್ ಪಟೇಲ್, ನಿಟ್ಟೂರು ಹನುಮಂತಪ್ಪ, ಯಡಿಹಳ್ಳಿ ಶೇಖರಪ್ಪ ಮತ್ತಿತರರಿದ್ದರು.

# ರಾಣೇಬೆನ್ನೂರು: ಮಾಸ್ಕ್ ಅಭಿಯಾನ



ರಾಣೇಬೆನ್ನೂರು, ಏ.26- ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಜಯಕುಮಾರ್ ಸಂತೋಷ್ ನೇತೃತ್ವದಲ್ಲಿ ಐದು ಪೊಲೀಸರ ತಂಡಗಳನ್ನು ರಚಿಸಿದ್ದು, ನಗರದಾದ್ಯಂತ ಸಂಚರಿಸಿ, ಮಾಸ್ಕ್ ಅಭಿಯಾನ ನಡೆಸಿ, ದಂಡ ವಿಧಿಸಲಾಯಿತು.

# ಬದುಕನ್ನು ಸಮಚಿತ್ತದಿಂದ ಅನುಭವಿಸಿ ಸಮರಸವಾಗಿ ಬದುಕುವುದೇ ಯುಗಾದಿ

## ಹಿರಿಯ ಸಾಹಿತಿ ಶಶಿಕಲಾ ಶಂಕರಮೂರ್ತಿ ವಿಶ್ಲೇಷಣೆ



ದಾವಣಗೆರೆ,ಏ.26- ಬದುಕನ್ನು ಸಮಚಿತ್ತದಿಂದ ಅನುಭವಿಸಿ ಸಮರಸವಾಗಿ ಬದುಕುವುದೇ ನಿಜವಾದ ಯುಗಾದಿ ಹಬ್ಬ ಎಂದು ಕನ್ನಡ ಭಾಷಾ ಶಿಕ್ಷಕರೂ ಆದ ಹಿರಿಯ ಸಾಹಿತಿ ಶ್ರೀಮತಿ ಎ.ಸಿ. ಶಶಿಕಲಾ ಶಂಕರಮೂರ್ತಿ ಅವರು ವಿಶ್ಲೇಷಿಸಿದರು.

ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಸ್ಥಳೀಯ ಡಯಟ್ ಕಾಲೇಜಿನಲ್ಲಿ ಕಳೆದ ವಾರ ಏರ್ಪಾಡಾಗಿದ್ದ ರಾಜ್ಯ ಮಟ್ಟದ ಯುಗಾದಿ ಕವಿಗೋಷ್ಠಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬದುಕೇ ಒಂದು ಜೀವಂತ ಕಾರ್ಯ. ಬಾಳುತ್ತಾ, ನೋವು - ನಲಿವನ್ನು ಸಹಜವಾಗಿ ಸ್ವೀಕರಿಸಿದಾಗ ಮಾತ್ರ ಉಜ್ವಲ ಭವಿಷ್ಯ ಸಾಧ್ಯ ಎಂದು ಉದಾಹರಣೆಗಳ ಮೂಲಕ ಶಶಿಕಲಾ ಅವರು ಪ್ರತಿಪಾದಿಸಿದರು.

ಕಾವ್ಯದ ಹುಟ್ಟು, ಕವಿ ಪದ್ಯದಲ್ಲಿ ತರಬಹುದಾದ ಸಹಜ ಪದ, ಉದಾರತೆ, ಅರ್ಥ ಮತ್ತು ಕವಿತೆ ಮೂಡಿ ಬರುವ ಬಗೆ ಕುರಿತಂತೆ ರನ್ನನ ಗಧಾಯುದ್ಧ ಹಾಗೂ ಹಳೆಗನ್ನಡ ಪದ್ಯಗಳನ್ನು ಅವರು ಉದಾಹರಿಸಿದರು.

ಸರಳತೆಯಲ್ಲೂ ನಿರಾಡಂಬರ ಕವಿತೆ ಎಷ್ಟು ವೇಗವಾಗಿ ಮೂಡಿ ಬರಬಲ್ಲದು ಎಂಬುದನ್ನು ಜನಪದ ಕಾವ್ಯಗಳ ಮೂಲಕ ಶಶಿಕಲಾ ಅವರು ವಿವರಿಸುವುದರೊಂದಿಗೆ ಸಭಿಕರ ಗಮನ ಸೆಳೆದರು.

# ಕೊಟ್ಟೂರಿನಲ್ಲಿ ಸಚಿವ ಸಿಂಗ್ ಸಭೆ



ಕೊಟ್ಟೂರು, ಏ.26- ಮೂಲಭೂತ ಸೌಕರ್ಯ ಅಭಿವೃದ್ಧಿ, ಹಜ್ ಮತ್ತು ವಕ್ಫ್ ಹಾಗೂ ಬಳ್ಳಾರಿ-ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಆನಂದಸಿಂಗ್ ಅಧ್ಯಕ್ಷತೆಯಲ್ಲಿ ಕೋವಿಡ್-19 ನಿಯಂತ್ರಿಸುವ ನಿಟ್ಟಿನಲ್ಲಿ ಕೊಟ್ಟೂರು ತಾಲ್ಲೂಕು ಕಛೇರಿ ಮಹಾತ್ಮಗಾಂಧೀಜಿ ಸಭಾಂಗಣದಲ್ಲಿ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ಸಚಿವ ಆನಂದಸಿಂಗ್ ಅಧಿಕಾರಿಗಳಿಗೆ ಅಗತ್ಯ ಸಲಹೆಗಳನ್ನು ನೀಡಿದರು. ನಂತರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು, ತಹಶೀಲ್ದಾರ್ ಜಿ. ಅನಿಲ್‌ಕುಮಾರ್ ಹಾಜರಿದ್ದರು.

# ರೈಲ್ವೇ ನಿಲ್ದಾಣದ ಬಳಿ ನೇಣಿಗೆ ಶರಣು

ಹರಿಹರ, ಏ.26- ನಗರದ ರೈಲ್ವೇ ನಿಲ್ದಾಣದ ಬಳಿ ವ್ಯಕ್ತಿಯೋರ್ವ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ನಿನ್ನೆ ತಡ ರಾತ್ರಿ ನೇಣು ಹಾಕಿಕೊಂಡು ಮೃತಪಟ್ಟಿದ್ದು, ಬೆಳಗ್ಗೆ ರೈಲ್ವೆ ಸಿಬ್ಬಂದಿಗಳು ಕಾರ್ಯನಿರ್ವಹಿಸುವಾಗ ನೋಡಿ, ರೈಲ್ವೆ ಪೊಲೀಸ್ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಸ್ಥಳಕ್ಕೆ ಆಗಮಿಸಿದ ಪೊಲೀಸ್ ಅಧಿಕಾರಿಗಳು ತಪಾಸಣೆ ಮಾಡಿ ವ್ಯಕ್ತಿಯ ದೇಹವನ್ನು ದಾವಣಗೆರೆ ಶವಾಗಾರಕ್ಕೆ ರವಾನಿಸಿದ್ದಾರೆ.

ವ್ಯಕ್ತಿ ಕುರಿತು ಮಾಹಿತಿ ತಿಳಿದು ಬಂದಿರುವುದಿಲ್ಲ. ಸ್ಥಳಕ್ಕೆ ದಾವಣಗೆರೆ ರೈಲ್ವೆ ಪೊಲೀಸ್ ಠಾಣೆಯ ಪಿಎಸ್‌ಐ ರಮೇಶ್, ಔಟ್ ಪುಟ್ ಪೊಲೀಸ್ ಠಾಣೆಯ ಎಎಸ್‌ಐ ಬಸವರಾಜ್ ಭೇಟಿ ನೀಡಿದ್ದರು.

# ಅಪರಿಚಿತ ವ್ಯಕ್ತಿಯ ಶವ ಪತ್ತೆ



ದಾವಣಗೆರೆ, ಏ.26 - ಇದೇ ದಿನಾಂಕ 20ರಂದು ಹದಡಿ ಪೊಲೀಸ್ ಠಾಣೆಯ ಬಿಸಲೇರಿ ಹಳ್ಳಿ ಚಾನಲ್‌ನ ನೀರಿನಲ್ಲಿ ಸುಮಾರು 60 ರಿಂದ 65 ವಯಸ್ಸಿನ ಅಪರಿಚಿತ ಗಂಡಸಿನ ಶವ ದೊರೆತಿದೆ. ಅವರ ಅಂಗಿಯ ಮೇಲೆ Shakir DVG ಎಂಬ ಟೈಲರ್ ಹೆಸರಿದ್ದು ಈ ಬಗ್ಗೆ ಹದಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತನ ಬಗ್ಗೆ ಮಾಹಿತಿ ಇದ್ದವರು ಹದಡಿ ಪೊಲೀಸ್ ಠಾಣೆ (94808 03232, 94808 03254) ಯನ್ನು ಸಂಪರ್ಕಿಸಬಹುದು.

# ಪಂಜಾಬ್‌ನಲ್ಲಿ ಪರಿಸ್ಥಿತಿ ಹದಗೆಟ್ಟರೂ ಲಾಕ್‌ಡೌನ್ ಇಲ್ಲ

ಚಂಡೀಘಡ, ಏ. 26 – ಪಂಜಾಬ್‌ನಲ್ಲಿ ಕೊರೊನಾ ಪರಿಸ್ಥಿತಿ ಮತ್ತಷ್ಟು ಹದಗೆಡಲಿದೆಯಾದರೂ, ಲಾಕ್‌ಡೌನ್ ಹೇರಿಕೆ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಅಮರೀಂದರ್ ಸಿಂಗ್ ತಿಳಿಸಿದ್ದಾರೆ. ರಾಜ್ಯದಲ್ಲಿ ಮೊದಲ ಬಾರಿಗೆ ಒಂದು ದಿನದ ಕೊರೊನಾ ಸೋಂಕಿತರ ಸಂಖ್ಯೆ 7 ಸಾವಿರ ದಾಟಿದ ನಂತರ ಕರೆಯಲಾಗಿದ್ದ ಸಭೆಯ ನಂತರ ಹೇಳಿಕೆ ನೀಡಿರುವ ಸಿಂಗ್, ಪರಿಸ್ಥಿತಿ ಹದಗೆಡಲಿದೆ. ವಿಶೇಷವಾಗಿ ಪಂಜಾಬ್‌ನ ದಕ್ಷಿಣ ಭಾಗದಲ್ಲಿ ಕೊರೊನಾ ಹೆಚ್ಚಾಗಲಿದೆ ಲೂಧಿಯಾನ ಜಿಲ್ಲೆಯಲ್ಲಿ ಭಾನುವಾರ ಒಂದೇ ದಿನ 1,300ಕ್ಕೂ ಹೆಚ್ಚು ಸೋಂಕಿತರು ಪತ್ತೆಯಾಗಿದ್ದಾರೆ ಎಂದು ಹೇಳಿದ್ದಾರೆ. ಲಾಕ್‌ಡೌನ್ ಹೇರಿಕೆ ಮೂಲಕ ಕೊರೊನಾ ತಡೆಯುವ ಕ್ರಮಕ್ಕೆ ಒಪ್ಪದ ಸಿಂಗ್, ಇದರಿಂದ ಆರ್ಥಿಕ ಸಂಕಷ್ಟಗಳು ಹೆಚ್ಚಾಗಲಿವೆ ಹಾಗೂ ಕಾರ್ಮಿಕರ ವಲಸೆ ಆರಂಭವಾಗಲಿದೆ ಎಂದಿದ್ದಾರೆ.

# ಕೊರೊನಾ : ಆಯೋಗ ಕಾರಣ

**(1ನೇ ಪುಟದಿಂದ)** ಮಾಡಿಕೊಟ್ಟರಿ. ಆಯೋಗ ಕೊರೊನಾದ ಎರಡನೇ ಅಲೆಗೆ ಕಾರಣವಾಗಿದೆ ಎಂದು ತರಾಟೆಗೆ ತೆಗೆದುಕೊಂಡಿತು.

ಮತ ಎಣಿಕೆಗಾಗಿ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದು ಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ವಕೀಲರು ಹೇಳಿದ್ದನ್ನು ತರಾಟೆಗೆ ತೆಗೆದುಕೊಂಡ ಮುಖ್ಯ ನ್ಯಾಯಮೂರ್ತಿ, ದೇಶದಲ್ಲಿ ಕೊರೊನಾ ಎರಡನೇ ಅಲೆ ಉಲ್ಬಣಿಸಿರುವುದಕ್ಕೆ ಚುನಾವಣಾ ಆಯೋಗವನ್ನೇ ಹೊಣೆ ಮಾಡಬೇಕು. ಆಯೋಗದ ಅಧಿಕಾರಿಗಳ ವಿರುದ್ಧ ಹತ್ಯೆ ಆರೋಪ ದಾಖಲಿಸಬೇಕು ಎಂದು ಕಿಡಿ ಕಾರಿದರು.

ಮೇ 2ರಂದು ನಡೆಯಲಿರುವ ಮತ ಎಣಿಕೆಯನ್ನು ತಡೆಯಲೂ ಸಹ ಹಿಂಜರಿಯುವುದಿಲ್ಲ ಎಂದು ನ್ಯಾಯಾಲಯ ಮೌಖಿಕ ಎಚ್ಚರಿಕೆ ನೀಡಿದೆ. ಭಾನುವಾರದಂದು ತಮಿಳುನಾಡಿನಲ್ಲಿ 15 ಸಾವಿರಕ್ಕೂ ಹೆಚ್ಚು ಕೊರೊನಾ ಪ್ರಕರಣಗಳು ಕಂಡು ಬಂದಿದ್ದು, ಲಕ್ಷಕ್ಕೂ ಹೆಚ್ಚು ಸಕ್ರಿಯ ಸೋಂಕಿತರಿದ್ದಾರೆ.

ತಮಿಳುನಾಡು, ಕೇರಳ, ಅಸ್ಸಾಂ ಹಾಗೂ ಪಶ್ಚಿಮ ಬಂಗಾಳ ಮತ್ತು ಪುದುಚೆರಿಗಳ ವಿಧಾನಸಭೆಗಳಿಗೆ ಚುನಾವಣೆ ನಡೆದಿದ್ದು, ಮೇ 2ರಂದು ಮತಗಳ ಎಣಿಕೆ ನಡೆಯಲಿದೆ. ಪಶ್ಚಿಮ ಬಂಗಾಳ ಹೊರತುಪಡಿಸಿ ಉಳಿದೆಡೆ ಮತದಾನ ಪೂರ್ಣಗೊಂಡಿದೆ. ಪಶ್ಚಿಮ ಬಂಗಾಳದಲ್ಲಿ ಏಪ್ರಿಲ್ 29ರಂದು ಕೊನೆಯ ಹಂತದ ಮತದಾನ ನಡೆಯಲಿದೆ.


ಇದಕ್ಕೂ ಮುಂಚೆ ಕಲ್ಕತ್ತಾ ಹೈಕೋರ್ಟ್, ಕೊರೊನಾ ನಿಯಮಗಳು ಪಾಲನೆಯಾಗದ ಬಗ್ಗೆ ಚುನಾವಣಾ ಆಯೋಗವನ್ನು ತರಾಟೆಗೆ ತೆಗೆದುಕೊಂಡಿತ್ತು.

# ಹರಿಹರ : ರೈಲಿಗೆ ಬಿದ್ದು ಆತ್ಮಹತ್ಯೆ



ಹರಿಹರ, ಏ.26- ನಗರದ ಹೊರವಲಯದ ಗಂಗನರಸಿ ಗ್ರಾಮದ ಅಭಿಷೇಕ ತಂದೆ ಕರಿಬಸಪ್ಪ (18) ವರ್ಷದ ಬಾಲಕ ಸಂಚರಿಸುವ ರೈಲಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಗಂಗನರಸಿ ಗ್ರಾಮದ ಯುವಕ ಅಭಿಷೇಕ್ ಬೆಳಗ್ಗೆ 8.30 ರ ಸಮಯದಲ್ಲಿ ಗ್ರಾಮದ ಬಳಿ ಸಂಚರಿಸುವ ರೈಲಿಗೆ ಬಿದ್ದು ಮರಣ ಹೊಂದಿದ್ದಾನೆ. ಸಾವಿನ ಬಗ್ಗೆ ನಿಖರವಾದ ಮಾಹಿತಿ ಲಭ್ಯವಿರುವುದಿಲ್ಲ. ದಾವಣಗೆರೆ ರೈಲ್ವೆ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದಾರೆ.

## ಕೃಷಿ ಇಲಾಖೆ ನಿವೃತ್ತ ನೌಕರ ಶಿವಣ್ಣ ನಿಧನ



ದಾವಣಗೆರೆ ವಾಸಿ, ಕೃಷಿ ಇಲಾಖೆ ನಿವೃತ್ತ ನೌಕರ ಶಿವಣ್ಣ (79) ಅವರು ದಿನಾಂಕ 26.04.2021ರ ಸೋಮವಾರ ಸಂಜೆ 6 ಗಂಟೆಗೆ ನಿಧನರಾದರು. ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.04.2021ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಮನೆಗಳು ಮಾರಾಟಕ್ಕಿವೆ**
40x60 North 3 ಬೆಡ್ ರೂಂ ಮನೆ ಕುವೆಂಪು ಬಡಾವಣೆಯಲ್ಲಿ, ಜಯನಗರ ಹತ್ತಿರ ಹೈಟೆಕ್ ಲೇಔಟ್‌ನಲ್ಲಿ 30x40, 30x50 West, ಹೊಸ ಮನೆ 70 ರಿಂದ 80 ಲಕ್ಷಕ್ಕೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**'ಬೋರ್ ಪಾಯಿಂಟ್'..?**
ಫೌಂಡೇಷನ್ ತೋಡುವ ಮುನ್ನ ಪಾಯಿಂಟ್ ಮಾಡಿಸಿ ಬೋರ್ ಕೊರೆಯಿಸಿಕೊಳ್ಳಿ. ನಂತರ ಬೋರ್ ಗಾಡಿ ನಿಲ್ಲಿಸುವುದು ಕಷ್ಟ.
ಜಯಚಂದ್ ಪಿ. ಜೈನ್
98445-83442

**ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್, ರಂಗನಾಥ ಬಡಾವಣೆಯಲ್ಲಿ 30x50 ಉತ್ತರ, ಸಿದ್ದವೀರಪ್ಪ ಬಡಾವಣೆಯಲ್ಲಿ 40x60 ಉತ್ತರ, 40x60 ದಕ್ಷಿಣ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಉತ್ತರ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ತಕ್ಷಣ ಬೇಕಾಗಿದ್ದಾರೆ**
ನುರಿತ ಕಂಪ್ಯೂಟರ್ ಆಪರೇಟರ್-2 (ಕನ್ನಡ ಮತ್ತು ಇಂಗ್ಲಿಷ್)
ಅನುಭವಿ ಸ್ಟಾಫ್ ನರ್ಸ್‌ಗಳು (GNM/ANM), ಸಂಪರ್ಕಿಸಿ
ಆಶ್ರಯ ಆಸ್ಪತ್ರೆ
9886802626, 8792629379

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. 'ಬಿ' ಬ್ಲಾಕ್‌ನಲ್ಲಿ ರಮಾನಂದ ಕಾಂಪೌಂಡ್ ಹತ್ತಿರ 27x40 East, 40x60 East, 30x50 West, 30x50 South, 40x50North west Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗೆ ಇದೆ**
13th Cross, Siddaveerappa Layout, BIET Road, Davanagere.
Ph: 70198 58742

ನಮ್ಮಲ್ಲಿ ಹೋಲ್‌ಸೇಲ್ ದರದಲ್ಲಿ ಶಾಲು, ಪೇಟಾ, ಮೊಮೆಂಟೋ, ಮೆಡಲ್ಸ್, ಮುತ್ತಿನ ಹಾರಗಳು ಹಾಗೂ ವಾಲ್ ಪೇಂಟಿಂಗ್ಸ್ ದೊರೆಯುತ್ತವೆ. ಸಂಪರ್ಕಿಸಿ.
9535651553, 7619571540

**ರೂಂ ಬಾಡಿಗೆಗೆ ಇದೆ**
ಎಂಸಿಸಿ ಬಿ ಬ್ಲಾಕ್‌ನಲ್ಲಿ 8ನೇ ಮೇನ್, ದಾವಣಗೆರೆ ಸಿಂಗಲ್ ಅಟ್ಯಾಚ್ಡ್ ಬಾತ್ ರೂಂ, COT, ನೀರಿನ ಸೌಲಭ್ಯವಿರುವ Ground Floor ಬಾಡಿಗೆಗೆ ಇದೆ. ಆಸಕ್ತಿ ಉಳ್ಳವರು ಸಂಪರ್ಕಿಸಿರಿ :
88618 83531

**ಜಾಗ ಬಾಡಿಗೆಗಿದೆ**
ದಾವಣಗೆರೆಯಿಂದ 7 ಕಿ.ಮೀ ದೂರದಲ್ಲಿರುವ ಮಾಗಾನಹಳ್ಳಿಯಲ್ಲಿ ಕೋಳಿಫಾರಂ, ಕುರಿ ಫಾರಂ ಮಾಡುವುದಕ್ಕೆ ಸೂಕ್ತವಾದ ಜಾಗ ಬಾಡಿಗೆಗಿದೆ. ನೀರಿನ ಸೌಕರ್ಯ, ರಸ್ತೆ ಸೌಕರ್ಯವುಳ್ಳ ಜಾಗ ಬಾಡಿಗೆಗಿದೆ. ಸಂಪರ್ಕಿಸಿ
99456 12842
63646 44033

**ಹಕ್ಕುಪತ್ರ ಹಾಗೂ ಕ್ರಯಪತ್ರ ಕಳೆದಿದೆ**
ಶ್ರೀಮತಿ ನಾಗಮ್ಮ ಕೋಂ ಲೇಟ್ ಎ.ಡಿ. ಹನುಮಂತಪ್ಪನವರ ಹೆಸರಿನಲ್ಲಿರುವ ಖಾಲಿ ನಿವೇಶನದ ಹಕ್ಕು ಪತ್ರ ಹಾಗೂ ಕ್ರಯಪತ್ರದ ಸಂಖ್ಯೆ 613/343, 40x60, ಎಸ್.ಜಿ. ಹಳ್ಳಿ, ಗೋಮಾಳದ ಪತ್ರವು ದಿನಾಂಕ 13.04.2021ರ ಬೆಳಿಗ್ಗೆ 11ಕ್ಕೆ ಮನೆಯಿಂದ ನಿಟುವಳ್ಳಿಗೆ ಹೋಗುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.
94484 43198

**ಬೆಕ್ಕಿನ ಮರಿ ಬೇಕಾದರೆ ಕರೆ ಮಾಡಿ**
96864 62502

**ಮನೆ ಬಾಡಿಗೆಗಿದೆ**
ನಂ.961/5, ಫಸ್ಟ್ ಫ್ಲೋರ್, 3BHK, ಬೋರ್‌ವೆಲ್ ಹಾಗೂ ನಲ್ಲಿ ನೀರಿನ ಸೌಕರ್ಯವಿದ್ದು, 2 ಬಾತ್‌ರೂಂ, ದೊಡ್ಡ ಹಾಲ್ ಇದೆ. ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ, ಹದಡಿ ರಸ್ತೆ, ಹೆಚ್.ಪಿ ಪೆಟ್ರೋಲ್ ಬಂಕ್ ಹಿಂಭಾಗ, ದಾವಣಗೆರೆ.
ಮೊ: 72591 47046

**ಸೈಟುಗಳು ಮಾರಾಟಕ್ಕಿವೆ**
ಎಂ.ಸಿ.ಸಿ 'ಎ' ಬ್ಲಾಕ್ 35x50 ಪೂರ್ವ, ಎಸ್.ಎಸ್. ಎನ್‌ಕ್ಲೇವ್ 40x60 ಪೂರ್ವ.
ಸೈಟ್ ಮಾರುವುದಕ್ಕೆ ಹಾಗೂ ಕೊಳ್ಳುವುದಕ್ಕೆ ಸಂಪರ್ಕಿಸಿ
86181 82332

**ಮಳಿಗೆ ಬಾಡಿಗೆಗೆ ಇದೆ**
ದಾವಣಗೆರೆ ನಗರದ ಪಿ.ಬಿ. ರೋಡ್, ಸಂಗೊಳ್ಳಿರಾಯಣ್ಣ ಸರ್ಕಲ್ ಹತ್ತಿರ, ಬೋರ್ ನೀರು, ಅಟ್ಯಾಚ್ಡ್ ಬಾತ್ ರೂಂವುಳ್ಳ 15x40 ಅಳತೆಯ ಮಳಿಗೆ ಕಮರ್ಷಿಯಲ್ ಕಾಂಪ್ಲೆಕ್ಸ್/ಯಾವುದಾದರೂ ವ್ಯಾಪಾರಕ್ಕಾಗಿ/ಆಫೀಸ್/ಶೋರೂಂಗೆ ಯೋಗ್ಯವಿದ್ದು ಬಾಡಿಗೆಗೆ ಇದೆ.
86601 25491
98453 63900, 95353 96666

**ಶ್ರೀ ಮರುಳಸಿದ್ದೇಶ್ವರ ಜ್ಯೂಯಲರ್ಸ್**
ಮುದೇಗೌಡ್ರ ಬೆಳ್ಳಿ-ಬಂಗಾರದ ಅಂಗಡಿ
ಚಾಮರಾಜಪೇಟೆ, ದಾವಣಗೆರೆ.
**ಕೆಲಸಕ್ಕೆ ಬೇಕಾಗಿದ್ದಾರೆ**
ನಾಲ್ಕು ವರ್ಷ ಅನುಭವ ಇರಬೇಕು.
ಲಾಕ್‌ಡೌನ್ ಪ್ರಯುಕ್ತ, ನಮ್ಮ ನೆಚ್ಚಿನ ಗ್ರಾಹಕರಿಗೆ ತಿಳಿಸುವುದೇನೆಂದರೆ, ನಿಮಗೆ ಬಂಗಾರ ಮತ್ತು ಬೆಳ್ಳಿ ಸಾಮಾನುಗಳ ಅವಶ್ಯಕತೆ ಇದ್ದಲ್ಲಿ ನಮ್ಮ ಮೊಬೈಲ್ ಸಂಖ್ಯೆಗೆ ಕರೆ ಮಾಡಿರಿ.
98447 90690
ಜಗದೀಶ್ : 90192 15535

**ಕುರಿಗಳು ಮಾರಾಟಕ್ಕಿವೆ**
400 Rs per kg
Phone no: 9482146430

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**Commercial Property for sale**
infront of aralimara bus stop 15x35 ground and 2BHK at 1st floor
Contact 92417 50559

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಕೊಳ್ಳೇಗಾಲದಿಂದ ನೇರ ಪರಿಹಾರ**
9880730952
ಈ ನಂಬರಿಗೆ ಕರೆ ಮಾಡಿ ನಿಮ್ಮ ಸಮಸ್ಯೆಗಳು ಏನೇ ಇರಲಿ , ಎಷ್ಟೇ ಕಠಿಣವಾಗಿರಲಿ ಶ್ರೀ ಕಾಳಿಕಾದೇವಿ ಪೂಜಾ ಶಕ್ತಿಯಿಂದ ಪರಿಹಾರ ಶತಸಿದ್ಧ.
ಪಂಡಿತ್ ದುರ್ಗಾಪ್ರಸಾದ್ ಗುರೂಜಿ

**JOBS**
MCS ACADEMY
Training & Placement Cell
98444 92888

**ಓಂ ಶ್ರೀ ಕಾಳಿ ಸ್ವರಭವಿಷ್ಯ**
ನುಡಿದಂತೆ ನಡೆಯುವರು.
ಪಂಡಿತ್ ಕಾಳಿಪ್ರಸಾದ್
ಇವರು ಅಘೋರ ನಾಗಸಾಧು ಬ್ರಹ್ಮವಿದ್ಯೆಯಿಂದ 3 ಗಂಟೆಯಲ್ಲಿ ಪರಿಹಾರ. ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿದ್ದರೂ ಇಂದೇ ಕರೆ ಮಾಡಿ.
ಮೊ: 9591984627

**ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ಜ್ಯೋತಿಷ್ಯಾಲಯ**
ಪಂಡಿತ್ ಚಂದ್ರಶೇಖರ್ ಗುರೂಜಿ
ನಂಬರ್ ಒನ್ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ದಾಂಪತ್ಯ ಸಮಸ್ಯೆ, ಸ್ತ್ರೀ-ಪುರುಷ ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿದ್ದರೂ 3ದಿನದಲ್ಲಿ ಶಾಶ್ವತ ಪರಿಹಾರ. ಆಗದಿದ್ದಲ್ಲಿ ಹಣ ವಾಪಸ್
ಮೊ: 99800 57857

# 25 ತಿಂಗಳ ಅವಧಿ ಮುಂದುವರಿಕೆಗೆ ರಿಟ್

## ಮಲೇಬೆನ್ನೂರು ಪುರಸಭಾ ಸದಸ್ಯರಿಂದ ಹೈಕೋರ್ಟ್ ಮೊರೆ



ಮಲೇಬೆನ್ನೂರು, ಏ.26- ಇಲ್ಲಿನ ಪುರಸಭೆಯ ಎಲ್ಲಾ 23 ಸದಸ್ಯರು ತಮ್ಮ ಅವಧಿಯನ್ನು 25 ತಿಂಗಳು ಮುಂದುವರೆಸುವಂತೆ ಸರ್ಕಾರಕ್ಕೆ ನಿರ್ದೇಶನ ಮಾಡಿ ಎಂದು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಇಂದು ಪಟ್ಟಣದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ಕುರಿತು ಮಾತನಾಡಿದ ಪುರಸಭೆ ಅಧ್ಯಕ್ಷೆ ಶ್ರೀಮತಿ ಪಾನಿಪೂರಿ ರಂಗನಾಥ್ ಅವರು ಹೈಕೋರ್ಟ್ ಮೊರೆ ಹೋಗಿರುವುದನ್ನು ಅಧಿಕೃತವಾಗಿ ತಿಳಿಸಿದರು.

ನಾವು ಸಂವಿಧಾನ ಬದ್ಧವಾಗಿ 2016 ರಿಂದ 2021 ರ ಮೇ 24 ರವರೆಗೆ ಮಲೇಬೆನ್ನೂರು ಪುರಸಭೆ ಸದಸ್ಯರಾಗಿ ಆಯ್ಕೆಯಾಗಿದ್ದೆವು. ಮೊದಲ 20 ತಿಂಗಳು ಅಧ್ಯಕ್ಷ-ಉಪಾಧ್ಯಕ್ಷರ ಅಧಿಕಾರವಧಿ ಮುಕ್ತಾಯವಾದ ನಂತರ ಸತತ 25 ತಿಂಗಳು ಸರ್ಕಾರ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿತ್ತು.

2018ನೇ ಸಾಲಿನ ಅಧ್ಯಕ್ಷ-ಉಪಾಧ್ಯಕ್ಷರ ಮೀಸಲಾತಿ ಕುರಿತು ರಾಜ್ಯದ ಬೇರೆ ಬೇರೆ ಸ್ಥಳೀಯ ಸಂಸ್ಥೆಗಳವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಹಾಕಿದ್ದರಿಂದ ಸಾಕಷ್ಟು ಸಮಯ ವಿಳಂಬವಾಯಿತು. ಇದರಿಂದ ನಮ್ಮ ಪುರಸಭೆಯ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳ ಮೀಸಲಾತಿ ನಿಗದಿಯಾಗಿದ್ದರೂ ಚುನಾವಣೆ ನಡೆಸಲಿಲ್ಲ.

ಅಕ್ಟೋಬರ್ 25-2018 ರಿಂದ ನವೆಂಬರ್ 6, 2020 ರವರೆಗೆ ನಮ್ಮ ಪುರಸಭೆಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದ ಸರ್ಕಾರ, ಚುನಾಯಿತ ಪ್ರತಿನಿಧಿಗಳಾದ ನಮ್ಮನ್ನು ನಿಷ್ಕ್ರಿಯ ಮಾಡಿತು ಎಂದು ಅಧ್ಯಕ್ಷೆ ಶ್ರೀಮತಿ ದೂರಿದರು.

ಸಂವಿಧಾನಾತ್ಮಕವಾಗಿ ಆಯ್ಕೆಯಾದ ನಮ್ಮ ಅವಧಿ ವಿನಾಕಾರಣ 25 ತಿಂಗಳು ಬಳಕೆಗೆ ಬರಲಿಲ್ಲ. ಇದರಿಂದಾಗಿ ನಾವು ಪಟ್ಟಣದಲ್ಲಿ ಸಾರ್ವಜನಿಕರ ನಿರೀಕ್ಷೆಯಂತೆ ಅಭಿವೃದ್ಧಿ ಮಾಡಲು ಸಾಧ್ಯವಾಗಲಿಲ್ಲ.

ಚುನಾಯಿತ ಪ್ರತಿನಿಧಿಗಳ ಹಕ್ಕನ್ನು ಕಸಿದುಕೊಳ್ಳುವುದರ ಜೊತೆಗೆ 25 ತಿಂಗಳ ಅವಧಿಯಲ್ಲಿ ಸಾಮಾನ್ಯ ಸಭೆ ಕರೆಯಲಿಲ್ಲ. ಅನುದಾನ ಹಾಗೂ ಖರ್ಚು-ವೆಚ್ಚಗಳ ಬಗ್ಗೆ ಸದಸ್ಯರಿಗೆ ಮಾಹಿತಿ ನೀಡಿಲ್ಲ. ಇದರಿಂದ ನಮಗೆ ಅನ್ಯಾಯವಾಗಿದೆ. ನಮ್ಮ ಅಧಿಕಾರ ಬಳಕೆಯಾಗದ ಆ 25 ತಿಂಗಳ ಅವಧಿಯನ್ನು ನಮ್ಮ ಅವಧಿ ಮುಕ್ತಾಯಗೊಳ್ಳಲಿರುವ ಮೇ 24 ರಿಂದ ಮುಂದುವರೆಸುವಂತೆ ಎಲ್ಲಾ 23 ಸದಸ್ಯರು ಪಕ್ಷಾತೀತವಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದೇವೆ ಎಂದು ಸದಸ್ಯರಾದ ಬಿ.ಎಂ. ಚನ್ನೇಶ್ ಸ್ವಾಮಿ, ಬಿ. ಸುರೇಶ್, ಎ. ಆರೀಫ್ ಅಲಿ ತಿಳಿಸಿದರು.

ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಲಿಂಗಪ್ಪ, ಪುರಸಭೆ ಉಪಾಧ್ಯಕ್ಷೆ ಅಂಜಿನಮ್ಮ ವಿಜಯಕುಮಾರ್, ಸದಸ್ಯರಾದ ಬರ್ಕತ್ ಅಲಿ, ಮಾಸಣಗಿ ಶೇಖರಪ್ಪ, ಶಶಿಕಲಾ ಕೇಶವಾಚಾರಿ, ನಾಮಿನಿ ಸದಸ್ಯ ಪಿ.ಆರ್. ರಾಜು ಮತ್ತು ಕೆ.ಜಿ. ಲೋಕೇಶ್, ಭೋವಿಕುಮಾರ್, ಪಾನಿಪೂರಿ ರಂಗನಾಥ್, ಎಂ.ಬಿ. ಫೈಜು, ಫಕೃದ್ದೀನ್ ಅಹಮದ್ ಸುದ್ದಿಗೋಷ್ಠಿಯಲ್ಲಿದ್ದರು.

# ಕೋವಿಡ್ ಕರ್ಫ್ಯೂ : ಹರಿಹರದಲ್ಲಿ ಅಗತ್ಯ ಕ್ರಮ



ಹರಿಹರ, ಏ.26- ರಾಜ್ಯ ಸರ್ಕಾರವು ನಾಳೆ ರಾತ್ರಿಯಿಂದ 14 ದಿನಗಳ ಕಾಲ ಕೊರೊನಾ ಕರ್ಫ್ಯೂ ಘೋಷಣೆ ಮಾಡುತ್ತಿದ್ದಂತೆ, ನಗರದ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ನಗರಸಭೆ ಪೌರಾಯುಕ್ತೆ ಎಸ್ ಲಕ್ಷ್ಮಿ, ತಾ.ಪಂ. ಇಓ ಜೆ.ಡಿ. ಗಂಗಾಧರನ್, ಸಿಪಿಐ ಸತೀಶ್ ಕುಮಾರ್, ಆರೋಗ್ಯ ಅಧಿಕಾರಿಗಳಾದ ಡಾ. ಚಂದ್ರಮೋಹನ್, ಡಾ. ಹನುಮನಾಯ್ಕ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಮಹತ್ವದ ಸಭೆ ಮಾಡಿ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆಸಿದರು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿ, ಈಗಾಗಲೇ ತಾಲ್ಲೂಕಿನಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಕೊರೊನಾ ರೋಗವನ್ನು ತಡೆಗಟ್ಟಲು ಸರ್ಕಾರವು ನೀಡುತ್ತಿರುವ ಮಾರ್ಗಸೂಚಿಗಳನ್ನು ಸಾರ್ವಜನಿಕರು ಕಡ್ಡಾಯವಾಗಿ ಪಾಲನೆ ಮಾಡುವುದಕ್ಕೆ ಮುಂದಾಗಬೇಕಾಗಿದೆ ಎಂದರು.

ಗ್ರಾಮಾಂತರದಲ್ಲಿ ಮತ್ತು ನಗರದಲ್ಲೂ ಸಹ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಆಸ್ಪತ್ರೆಗಳಲ್ಲಿ ಲಸಿಕೆಯನ್ನು ಹಾಕುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಕೊರೊನಾ ರೋಗಿಗಳಿಗೆ ಎಲ್ಲಾ ರೀತಿಯ ವೈದ್ಯಕೀಯ ಚಿಕಿತ್ಸೆಯ ವ್ಯವಸ್ಥೆ ಮಾಡಲಾಗಿದೆ. ನಾಳೆಯಿಂದ ಗುತ್ತೂರು ಬಳಿ ಕೊರೊನಾ ಆರೋಗ್ಯ ಕೇಂದ್ರ ತೆರೆಯಲಾಗುತ್ತಿದೆ.

ಪೌರಾಯುಕ್ತರಾದ ಎಸ್. ಲಕ್ಷ್ಮಿ ಮಾತನಾಡಿ, ನಗರಸಭೆ ವತಿಯಿಂದ ವ್ಯಾಪಾರಸ್ಥರು ಅಗತ್ಯ ವಸ್ತುಗಳು, ತರಕಾರಿ ಗಳನ್ನು ಬೆಳಗ್ಗೆ 6 ರಿಂದ 10 ರವರೆಗೆ ಗಾಂಧಿ ಮೈದಾನದಲ್ಲಿ ಮಾರಾಟ ಮಾಡಲು ಅವಕಾಶ ನೀಡಲಾಗಿದೆ. ನಗರಸಭೆ ವತಿಯಿಂದ ಎಲ್ಲಾ ವಾರ್ಡ್‌ಗಳಲ್ಲಿ ಸ್ವಚ್ಛತೆಗೆ ಮತ್ತು ಶುದ್ಧ ಕುಡಿಯುವ ನೀರಿಗೆ ಹೆಚ್ಚು ಆದ್ಯತೆ ನೀಡಲಾಗಿದೆ. ಸರ್ಕಾರದ ನಿಯಮಗಳನ್ನು ಪಾಲನೆ ಮಾಡದೆ ಇರುವವರ ಮೇಲೆ ದಂಡವನ್ನು ವಿಧಿಸಲಾಗುತ್ತದೆ ಎಂದು ಹೇಳಿದರು.

ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್ ಮಾತನಾಡಿ, ಕೊರೊನಾ ರೋಗಿಗಳಿಗೆ ತೊಂದರೆ ಆಗದಂತೆ ಎಲ್ಲಾ ಬಗೆಯ ವೈದ್ಯಕೀಯ ವ್ಯವಸ್ಥೆ ಮಾಡಲಾಗಿದೆ.

ಸಾರ್ವಜನಿಕ ಆಸ್ಪತ್ರೆಯ ಡಾ. ಹನುಮನಾಯ್ಕ್ ಮಾತನಾಡಿ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೊರೊನಾ ರೋಗಿಗಳಿಗೆ ಚಿಕಿತ್ಸೆ ನೀಡುವುದಕ್ಕೆ ಪ್ರತ್ಯೇಕವಾದ ಸ್ಥಳವನ್ನು ನಿಗದಿಪಡಿಸಲಾಗಿದೆ. ಆಸ್ಪತ್ರೆಯಲ್ಲಿ ಔಷಧಿ ಮತ್ತು ಚುಚ್ಚುಮದ್ದಿಗೆ ಯಾವುದೇ ರೀತಿಯ ತೊಂದರೆ ಇರುವುದಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಿಪಿಐ ಸತೀಶ್ ಕುಮಾರ್, ಡಾ. ವಿಶ್ವನಾಥ ಇನ್ನಿತರರು ಹಾಜರಿದ್ದರು.

# ಮೇ 12ರವರೆಗೆ ಕೊರೊನಾ ತಡೆ ನಿರ್ಬಂಧ : ಮಾರ್ಗಸೂಚಿ ಪ್ರಕಟ

(1ನೇ ಪುಟದಿಂದ) ಕಚೇರಿಗಳು.

ರಕ್ಷಣೆ, ಸರ್ಕಾರಿ ಸ್ವಾಮ್ಯದ ಕಚೇರಿ, ಕೇಂದ್ರೀಯ ಸಶಸ್ತ್ರ ಮೀಸಲು ಪಡೆ, ಟೆಲಿಕಾಂ ಮುಂತಾದ ಅಗತ್ಯ ಸೇವೆಗಳ ಕಚೇರಿಗಳು.

ಪೆಟ್ರೋಲಿಯಂ, ಅಡುಗೆ ಅನಿಲ, ವಿದ್ಯುತ್ ಉತ್ಪಾದನೆ, ಅಂಚೆ, ವಿಕೋಪ ನಿರ್ವಹಣೆ ಮುಂತಾದ ಸಾರ್ವಜನಿಕ ಸೇವೆಗಳ ಕಚೇರಿಗಳು. ಬ್ಯಾಂಕ್, ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಮತ್ತಿತರೆ ಹಣಕಾಸು ಸಂಸ್ಥೆಗಳು. ರೈಲ್ವೆ ಹಾಗೂ ಸಂಬಂಧಿತ ಕಾರ್ಯಾಚರಣೆಗಳು.

ಆಯುಷ್ ಹಾಗೂ ಪಶು ಆಸ್ಪತ್ರೆ ಸೇರಿದಂತೆ ಎಲ್ಲಾ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು, ಕ್ಲಿನಿಕ್, ಲ್ಯಾಬ್, ಟೆಲಿ ಮೆಡಿಸಿನ್, ಔಷಧ ಅಂಗಡಿಗಳು, ಜನೌಷಧ ಕೇಂದ್ರಗಳು, ರಕ್ತಭಂಡಾರ ಇತ್ಯಾದಿಗಳು.

ವೈದ್ಯಕೀಯ ಸಿಬ್ಬಂದಿ ಅಂತರ ಜಿಲ್ಲೆ ಹಾಗೂ ಅಂತರ ರಾಜ್ಯ ಪ್ರಯಾಣಕ್ಕೆ ಅವಕಾಶ ಇದೆ. ಕೃಷಿಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ಮಕ್ಕಳು, ಅಂಗವಿಕಲರು, ಮಾನಸಿಕ ಅಸ್ವಸ್ಥರು, ಹಿರಿಯ ನಾಗರಿಕರು ಮುಂತಾದವರ ಆಶ್ರಯ ತಾಣಗಳು.

ಗೂಡ್ಸ್ ವಾಹನ ಸೇರಿದಂತೆ, ಎಲ್ಲಾ ರೀತಿಯ ಸರಕು ವಾಹನಗಳಿಗೆ ಅನುಮತಿ

**ಜನಸಂಚಾರದ ಮೇಲೆ ನಿರ್ಬಂಧ :** ಸಾರ್ವಜನಿಕ ಹಾಗೂ ಖಾಸಗಿ ಬಸ್‌ಗಳ ಮೇಲೆ ನಿರ್ಬಂಧ. ಅನುಮತಿ ಇಲ್ಲವೇ ತುರ್ತು ಸಂದರ್ಭದಲ್ಲಿ ಮಾತ್ರ ಅಂತರ ರಾಜ್ಯ ಹಾಗೂ ರಾಜ್ಯದ ಒಳಗೆ ಪ್ರಯಾಣಿಕರ ವಾಹನಕ್ಕೆ ಅನುಮತಿ.

ಪ್ರಯಾಣದ ದಾಖಲೆ ಹೊಂದಿರುವವರು ಹಾಗೂ ತುರ್ತು ಅಗತ್ಯವಿರುವವರಿಗೆ ಆಟೋ ಸೇವೆ.

ಕಟ್ಟಡ ನಿರ್ಮಾಣ ಕಾರ್ಮಿಕರು, ಕಟ್ಟಡ ನಿರ್ಮಾಣ ಸಂಸ್ಥೆಯ ಪಾಸ್ ಹೊಂದಿರಬೇಕು.

ರೋಗಿಗಳು ಹಾಗೂ ಲಸಿಕೆ ಪಡೆಯುವವರು ದಾಖಲೆಗಳೊಂದಿಗೆ ಪ್ರಯಾಣಿಸಲು ಅನುಮತಿ


**ಬೆಳಿಗ್ಗೆ 6 ರಿಂದ 10ರವರೆಗೆ ದಿನಸಿ, ಮದ್ಯ :** ಆಹಾರ, ದಿನಸಿ, ಹಣ್ಣು, ತರಕಾರಿ, ಹಾಲು, ಮಾಂಸ ಮತ್ತಿತರೆ ಸರಕುಗಳನ್ನು ಮಾರಲು ಬೆಳಿಗ್ಗೆ 6ರಿಂದ 10ರವರೆಗೆ ಅನುಮತಿ ನೀಡಲಾಗಿದೆ. ಮದ್ಯದಂಗಡಿಗಳೂ ಇದೇ ಸಮಯದಲ್ಲಿ ಕಾರ್ಯ ನಿರ್ವಹಿಸಬೇಕು.

ಆಹಾರ ಸಂಸ್ಕರಣೆ, ಬ್ಯಾಂಕ್, ಮುದ್ರಣ – ವಿದ್ಯುನ್ಮಾನ ಮಾಧ್ಯಮ, ಟೆಲಿಕಮ್ಯುನಿಕೇಷನ್, ಇಂಟರ್‌ನೆಟ್, ಮಾಹಿತಿ ತಂತ್ರಜ್ಞಾನ, ಇ – ಕಾಮರ್ಸ್, ವಿದ್ಯುತ್ ಉತ್ಪಾದನೆ, ಶೀತಲ ಘಟಕ, ಖಾಸಗಿ ಭದ್ರತಾ ಸೇವೆಗಳಿಗೆ ಅನುಮತಿ

ಗಾರ್ಮೆಂಟ್ಸ್ ಹೊರತು ಪಡಿಸಿ ಉಳಿದೆಲ್ಲ ಕೈಗಾರಿಕಾ ಘಟಕಗಳ ಕಾರ್ಯ ನಿರ್ವಹಣೆಗೆ ಅನುಮತಿ

ಕಟ್ಟಡ ನಿರ್ಮಾಣ ಹಾಗೂ ರಿಪೇರಿಗಳಿಗೆ ಅನುಮತಿ.

# ಜಗಳೂರು ಬಿಇಒ ಆಗಿ ಮಂಜಪ್ಪ



ಜಗಳೂರು, ಏ.26- ತಾಲ್ಲೂಕಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಗುರುಸಿದ್ಧಾಪುರ ಪ್ರೌಢಶಾಲೆಯ ಮುಖ್ಯಶಿಕ್ಷಕ ಮಂಜಪ್ಪ ಅಧಿಕಾರ ವಹಿಸಿಕೊಂಡಿದ್ದಾರೆ. ಹಿಂದಿನ ಬಿಇಒ ಸಿ.ಎಸ್. ವೆಂಕಟೇಶ್ ಅವರು ಎಸಿಬಿ ಬಲೆಗೆ ಬಿದ್ದ ಕಾರಣ ಆ ಸ್ಥಾನ ತೆರವಾಗಿತ್ತು. ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಉಲೇಪ್ಪ, ಕಾರ್ಯದರ್ಶಿ ಎಂ. ಪ್ರಕಾಶ್, ಸಂಘದ ಪದಾಧಿಕಾರಿಗಳು ಮತ್ತು ಶಿಕ್ಷಕರು ಮಂಜಪ್ಪನವರಿಗೆ ಪುಸ್ತಕ ನೀಡುವುದರ ಮೂಲಕ ಸ್ವಾಗತಿಸಿದರು. ನಿವೃತ್ತ ನೌಕರರ ಸಂಘದ ಅಧ್ಯಕ್ಷ ಆನಂದಪ್ಪ, ಸತೀಶ್ ಇನ್ನಿತರರು ಹಾಜರಿದ್ದರು.

# ಹರಿಹರ ತಾ. ಜೆಡಿಎಸ್ ಅಧ್ಯಕ್ಷರಾಗಿ ಹಳ್ಳಿಹಾಳ್ ಪರಮೇಶ್ವರಪ್ಪ



ಮಲೇಬೆನ್ನೂರು, ಏ.26- ಹಳ್ಳಿಹಾಳ್ ಗ್ರಾಮದ ಜೆಡಿಎಸ್ ಮುಖಂಡ ಹಾಗೂ ಶ್ರೀನಂದಿ ಸೌಹಾರ್ದ ಸಹಕಾರಿ ನಿರ್ದೇಶಕರೂ ಆದ ಹೆಚ್.ಟಿ. ಪರಮೇಶ್ವರಪ್ಪ ಅವರನ್ನು ಹರಿಹರ ತಾಲ್ಲೂಕು ಗ್ರಾಮಾಂತರ ಜೆಡಿಎಸ್ ಘಟಕದ ನೂತನ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರು ಭಾನುವಾರ ನೂತನ ಅಧ್ಯಕ್ಷರನ್ನು ಸನ್ಮಾನಿಸಿ, ಅಭಿನಂದಿಸಿದರು.

ಜಿ. ಬೇವಿನಹಳ್ಳಿಯ ಬಂಡೇರ ತಿಮ್ಮಣ್ಣ ಅವರು 2007 ರಿಂದ ಇಲ್ಲಿಯವರೆಗೆ ಸತತ 14 ವರ್ಷಗಳ ಕಾಲ ಹರಿಹರ ತಾ. ಗ್ರಾಮಾಂತರ ಜೆಡಿಎಸ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

# ಜಗಳೂರು: ಕೋವಿಡ್ ಕೇರ್ ಸೆಂಟರ್ ಆರಂಭ



ಜಗಳೂರು, ಏ.26- ಶಾಸಕರ ಸೂಚನೆಯಂತೆ ತಾಲ್ಲೂಕಿನ ಮೆದಗಿನಕೆರೆ ಗ್ರಾಮದ ಹತ್ತಿರವಿರುವ ಮೊರಾರ್ಜಿ ದೇಸಾಯಿ ಶಾಲೆಯಲ್ಲಿ ಕೋವಿಡ್ ಸೋಂಕಿತರಿಗೋಸ್ಕರ ಕೋವಿಡ್ ಕೇರ್ ಸೆಂಟರ್‌ಗೆ ತಾಲ್ಲೂಕು ಆಡಳಿತವು ಸಕಲ ಸಿದ್ಧತೆ ಮಾಡಿದೆ.

ಶಾಸಕ ಎಸ್.ವಿ. ರಾಮಚಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೆದಗಿನಕೆರೆ ಗ್ರಾಮದ ಹತ್ತಿರವಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಕೋವಿಡ್ ಸೆಂಟರ್ ತೆರೆಯಲು ಸೂಚನೆ ನೀಡಲಾಗಿತ್ತು. ಅದರಂತೆ ಇಂದು ತಾಲ್ಲೂಕು ದಂಡಾಧಿಕಾರಿ ಡಾ. ನಾಗವೇಣಿ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಿ ಮಹೇಶ್ವರಪ್ಪ ಮತ್ತು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಾಗರಾಜ್ ಮತ್ತು ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ ಮಲ್ಲನಾಯ್ಕ್ ನೇತೃತ್ವದಲ್ಲಿ ಸಿಬ್ಬಂದಿಗಳು ಇಂದು ಕೋವಿಡ್ ಸೋಂಕಿತರಿಗೆ ಮೀಸಲಿಟ್ಟಿರುವ 6 ಕೊಠಡಿಗಳನ್ನು ಒಳಗೊಂಡಂತೆ ಸ್ಯಾನಿಟೈಸೇಷನ್ ಮಾಡಿಸಿ, ಕೋವಿಡ್ ಸೋಂಕಿತರಿಗೆ 50 ಬೆಡ್‌ಗಳನ್ನು ಹಾಕುವ ಮುಖಾಂತರ ಕೋವಿಡ್ ಸೆಂಟರ್ ಸಿದ್ಧತೆಗೊಳಿಸಿದರು.

ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ತಾಲ್ಲೂಕು ಆಡಳಿತ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿ ಮಲ್ಲನಾಯ್ಕ್, ಮೆದಗಿನಕೆರೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಜಿ. ಎನ್. ರೂಪಕಲಾ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಉಲ್ಲಂಘನೆ : ಫ್ಯಾನ್ಸಿ ಅಂಗಡಿ ವಿರುದ್ಧ ಕೇಸ್

ದಾವಣಗೆರೆ, ಏ.26- ಅಗತ್ಯ ವಸ್ತುಗಳನ್ನು ಹೊರತುಪಡಿಸಿ ಉಳಿದೆಲ್ಲಾ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡುವಂತೆ ಜಿಲ್ಲಾಡಳಿತ ಆದೇಶ ಹೊರಡಿಸಿದ್ದರೂ ಫ್ಯಾನ್ಸಿ ಅಂಗಡಿ ತೆರೆದು, ವ್ಯಾಪಾರ ಮಾಡುತ್ತಿದ್ದ ಆರೋಪದಲ್ಲಿ ಅಂಗಡಿ ಮಾಲೀಕನ ವಿರುದ್ಧ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದ ಬಳಿ ರೂಪಕಲಾ ಫ್ಯಾನ್ಸಿ ಸ್ಟೋರ್ ಬಗ್ಗೆ ವಿರುದ್ಧ ಪೊಲೀಸ್ ಠಾಣೆಯ ಹರೀಶ್, ಸೈಯದ್ ಅಲಿ ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಈ ಸಂಬಂಧ ಬಡಾವಣೆ ಪೊಲೀಸ್ ಠಾಣೆಯಲ್ಲಿ ಎಸ್ಐ ಬಿ.ಎಸ್. ಅರವಿಂದ್ ಪ್ರಕರಣ ದಾಖಲಿಸಿದ್ದಾರೆ.

## ಮತ್ತೆ ಸಂಕಷ್ಟದಲ್ಲಿ ಬಡ ಜನತೆ

**(1ನೇ ಪುಟದಿಂದ) ಅನುಭವಿಸುವಂತಾಗಿದೆ. ಬಟ್ಟೆ ಅಂಗಡಿ, ಬಂಗಾರದ ಅಂಗಡಿಗಳಲ್ಲಿ ಕೆಲಸ ಮಾಡುವ ಸಾವಿರಾರು ಕಾರ್ಮಿಕರು ಮತ್ತೆ ಕೆಲಸ ಅಥವಾ ವೇತನ ಇಲ್ಲದೆ ಜೀವನ ಸಾಗಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.**


**ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್**

ಆಡಳಿತ ಕಛೇರಿ, ನಂ.120, ಎಚ್.ಎಂ. ರಸ್ತೆ, ದಾವಣಗೆರೆ–577001

**ಗ್ರಾಹಕರ ಗಮನಕ್ಕೆ**

**ಬ್ಯಾಂಕಿನ ವ್ಯವಹಾರದ ವೇಳೆ ಬದಲು**

ಮಾನ್ಯ ಗ್ರಾಹಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ದೇಶದಲ್ಲಿ ಮತ್ತು ರಾಜ್ಯದಲ್ಲೂ ಕೊರೋನಾ ಹೆಮ್ಮಾರಿಯ (ಕೋವಿಡ್–19) 2ನೇ ಅಲೆಯು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಬ್ಯಾಂಕಿನ ವ್ಯವಹಾರದ ವೇಳೆಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನದಂತೆ ಪ್ರತಿ ದಿನ 4 ತಾಸುಗಳು ಮಾತ್ರ ವ್ಯವಹಾರವನ್ನು ನಡೆಸಲು ಸೂಚಿಸಿರುವುದರಿಂದ ನಮ್ಮ **ಬ್ಯಾಂಕಿನ ವ್ಯವಹಾರದ ವೇಳೆಯನ್ನು ದಿನಾಂಕ 27-04-2021 ರಿಂದ ಬೆಳಿಗ್ಗೆ 10-00 ಗಂಟೆಯಿಂದ ಮಧ್ಯಾಹ್ನ 2-00 ಗಂಟೆಯವರೆಗೆ ಮಾತ್ರ ನಡೆಸಲು** ತೀರ್ಮಾನಿಸಿದ್ದು, ಗ್ರಾಹಕರು ಬ್ಯಾಂಕು ನಿಗಧಿಪಡಿಸಿದ ವೇಳೆಯಲ್ಲಿ ತಮ್ಮ ವ್ಯವಹಾರವನ್ನು ನಡೆಸಲು ಸೂಚಿಸಿದೆ.

**ಜಿ.ವಿ. ಶಿವಶಂಕರ್** ಪ್ರಧಾನ ವ್ಯವಸ್ಥಾಪಕರು

**ಡಾ. ಶಾಮನೂರು ಶಿವಶಂಕರಪ್ಪ** ಅಧ್ಯಕ್ಷರು


# ಮುಚ್ಚಿದ ವ್ಯಾಪಾರ, ಏರಿದ ದರ

(1ನೇ ಪುಟದಿಂದ) ಡಿಮ್ಯಾಂಡ್ ಮಾಡಿ. ನಂತರ ಒಳ ಹೊಕ್ಕು ಸಾಮಗ್ರಿ ನೀಡುತ್ತಿದ್ದರು. ಚೌಕಾಸಿಗೆ ಆಸ್ಪದವಿರಲಿಲ್ಲ. ಕೆಲವೆಡೆ ಬಟ್ಟೆ ಹಾಗೂ ಚಪ್ಪಲಿ ಅಂಗಡಿಗಳಲ್ಲಿಯೂ ಅರ್ಧ ಬಾಗಿಲು ತೆರೆದು ವಹಿವಾಟು ನಡೆಯಿತು.

ಮಂಡಿಪೇಟೆ, ಅಶೋಕ ರಸ್ತೆ, ಹದಡಿ ರಸ್ತೆ ಗಡಿಯಾರ ಕಂಬ ಮುಂತಾದ ಪ್ರಮುಖ ರಸ್ತೆಗಳಲ್ಲಿನ ವಾಣಿಜ್ಯ ಮಳಿಗೆಗಳು ಮಾತ್ರ ಮಾರ್ಗಸೂಚಿಗೆ ಸೀಮಿತವಾಗಿದ್ದವು. ಬಡಾವಣೆಗಳ ಒಳಗಡೆ ಎಲ್ಲಾ ಬಗೆಯ ಅಂಗಡಿಗಳೂ ತೆರೆದಿದ್ದವು.

ಮುಖ್ಯ ರಸ್ತೆಗಳಲ್ಲಿ ಅನೇಕ ವ್ಯಾಪಾರಿಗಳು ಮಳಿಗೆ ತೆರೆಯಬೇಕೋ, ಬೇಡವೋ ಎಂಬ ಜಿಜ್ಞಾಸೆಯಲ್ಲಿದ್ದರು. ಯಾರಾದರೂ ಬಾಗಿಲು ಮುಚ್ಚಿಸಲು ಬಂದರೆ ನೋಡಿಕೊಳ್ಳೋಣ ಎಂದು ವ್ಯಾಪಾರ ಆರಂಭಿಸಿದ್ದ ಮಳಿಗೆಗಳನ್ನು ಪಾಲಿಕೆ ಸಿಬ್ಬಂದಿಗಳು ವೀಡಿಯೋ ಮಾಡಿಕೊಂಡು ಹೋಗಿದ್ದಾರೆ ಎನ್ನಲಾಗುತ್ತಿತ್ತು. ಸಂಜೆ ವೇಳೆಯಂತು ವೃತ್ತ ಹಾಗೂ ರಸ್ತೆಗಳಲ್ಲಿ ಜನರ ಓಡಾಟ ಎಂದಿಗಿಂತ ಹೆಚ್ಚಾಗಿತ್ತು.

ಮಂಗಳವಾರ ರಾತ್ರಿಯಿಂದ ಕೋವಿಡ್ ಕರ್ಫ್ಯೂ ವಿಧಿಸಿ, ಬೆಳಿಗ್ಗೆ 6ರಿಂದ 10ರವರೆಗೆ ಮಾತ್ರ ತರಕಾರಿ, ದಿನಸಿ ಇತರೆ ಮಾರಾಟಕ್ಕೆ ಅವಕಾಶ ನೀಡಿರುವುದರಿಂದ ಮಾರಾಟಗಾರರು ಆ ಸಮಯದಲ್ಲಿ ಅಗತ್ಯ ವಸ್ತುಗಳನ್ನು ತರಬೇಕೇ ಅಥವಾ ಮಾರಾಟ ಮಾಡಬೇಕೇ ಎಂಬ ಜಿಜ್ಞಾಸೆಯಲ್ಲಿದ್ದಾರೆ.

**ಆಪೇ ಆಟೋಗಳ ಕಾರುಬಾರು:** ಕಾನೂನು, ಮಾರ್ಗಸೂಚಿ ನಮಗೆ ಅನ್ವಯಿಸುವುದೇ ಇಲ್ಲ ಎಂಬಂತೆ ಆಪೇ ಆಟೋಗಳು ಜನರನ್ನು ತುಂಬಿಕೊಂಡು ಸಂಚರಿಸುತ್ತಿದ್ದವು. ಮಾಸ್ಕ್, ಹೆಲ್ಮೆಟ್ ಇಲ್ಲದವರಿಗೆ ದಂಡ ವಿಧಿಸುತ್ತಿದ್ದ ಪೊಲೀಸರು ಆಟೋಗಳನ್ನು ಕಂಡೂ ಕಾಣದಂತಿದ್ದರು. ಸಂಜೆಯಂತೂ ಒಂದು ಆಪೇ ಆಟೋದಲ್ಲಿ 10 ರಿಂದ 12ಕ್ಕೂ ಹೆಚ್ಚು ಜನರನ್ನು ತುಂಬಿಕೊಂಡು ತೆರಳುತ್ತಿದ್ದರು.

## ವೆಂಟಿಲೇಟರ್‌ಸಿಗದೇ ಸೋಂಕಿತೆ ಪರದಾಟ

(1ನೇ ಪುಟದಿಂದ) ಬಾಪೂಜಿ ಆಸ್ಪತ್ರೆಯ ಸಿಬ್ಬಂದಿಗೆ ಸೋಂಕಿತೆಯನ್ನು ಅಡ್ಮಿಟ್ ಮಾಡಿಕೊಳ್ಳುವಂತೆ ಸೂಚನೆ ನೀಡಿದರು.

ಬಾಪೂಜಿ ಆಸ್ಪತ್ರೆಯಲ್ಲಿ ಆಕೆಯನ್ನು ದಾಖಲು ಮಾಡಿಕೊಂಡಿದ್ದು, ಅಲಿಯೂ ಸೋಂಕಿತೆ ಅರ್ಧ ಗಂಟೆ ಕಾಲ ಪರದಾಡಬೇಕಾದ ಪರಿಸ್ಥಿತಿ.

ಜಿಲ್ಲೆಯಲ್ಲೂ ಕೊರೊನಾ ಸೋಂಕಿತರು ಹೆಚ್ಚುತ್ತಿರುವುದರಿಂದ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಈ ಸ್ಥಿತಿ ಉಂಟಾಗಿದೆ. ಹೀಗಾಗಿ, ಹೆಚ್ಚಿನ ಬೆಡ್ ಮತ್ತು ವೆಂಟಿಲೇಟರ್‌ಗಳನ್ನು ವ್ಯವಸ್ಥೆ ಮಾಡುವಂತೆ ಜಿಲ್ಲಾಡಳಿತಕ್ಕೆ ಜನರು ಒತ್ತಾಯಿಸಿದ್ದಾರೆ.

# 'ಕೋವಿಡ್ ಕರ್ಫ್ಯೂ' ಜಾರಿ

(1ನೇ ಪುಟದಿಂದ) ಸಮರ್ಥಿಸಿಕೊಂಡರು. ಮೇ 10 ರ ವೇಳೆಗೆ ಸೋಂಕು ನಿಯಂತ್ರಣಕ್ಕೆ ಬಾರದಿದ್ದರೆ, ಇದೇ ಕಠಿಣ ಕ್ರಮ ಮುಂದುವರೆಯಲಿದೆ. ಇದಕ್ಕೆ ಸಾರ್ವಜನಿಕರು ಅವಕಾಶ ನೀಡಬಾರದು. ಕೇಂದ್ರ, ರಾಜ್ಯ ಸರ್ಕಾರದ ಕಚೇರಿಗಳು, ಬ್ಯಾಂಕ್‌ಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ.

ಸರ್ಕಾರಿ ಕಚೇರಿಗಳು ಶೇ. 50 ರಷ್ಟು ಸಿಬ್ಬಂದಿಗೆ ಮಾತ್ರ ಅವಕಾಶ ನೀಡಲಾಗುವುದು. ಬ್ಯಾಂಕುಗಳ ವಹಿವಾಟು ಸಮಯ ಬದಲಾವಣೆಯಾಗಲಿದೆ ಎಂದರು.

ಇನ್ನು ಮುಂದೆ ಸೋಂಕು ಪೀಡಿತ ರೋಗಿಗಳಿಗೆ ಆಕ್ಸಿಜನ್ ಕೊರತೆ ಇರುವುದಿಲ್ಲ. ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ ಆಕ್ಸಿಜನ್ ಒದಗಿಸಲು ಸಮ್ಮತಿಸಿದೆ. ಅಷ್ಟೇ ಅಲ್ಲ ಸೋಂಕಿನ ಚಿಕಿತ್ಸೆಗೆ ಅತ್ಯವಶ್ಯವಾದ ರೆಮಿಡಿಸಿವಿರ್ ಚುಚ್ಚುಮದ್ದನ್ನು 50 ಸಾವಿರದಿಂದ 1.22 ಲಕ್ಷಕ್ಕೆ ಹೆಚ್ಚಿಸಿದೆ.

ಭಯ ಪಡುವುದು ಬೇಡ, ಆದರೆ ಎಚ್ಚರಿಕೆಯಿಂದ ಇರಿ, ಸರ್ಕಾರ ಸೋಂಕು ನಿವಾರಣೆಗಾಗಿ ಎಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇದಕ್ಕೆ ನಿಮ್ಮ ಸಹಕಾರ ಅಗತ್ಯವಿದೆ ಎಂದರು.

## ನಗರದ 15ನೇ ವಾರ್ಡಿನಲ್ಲಿ ಇಂದು ಲಸಿಕೆ ಅಭಿಯಾನ

ಮಹಾನಗರ ಪಾಲಿಕೆ 15ನೇ ವಾರ್ಡಿನ ವಿನೋಬನಗರ 4ನೇ ಮುಖ್ಯ ರಸ್ತೆ 1ನೇ ತಿರುವಿನಲ್ಲಿರುವ ಸೇಂಟ್ ಮೇರಿ ಶಾಲೆಯಲ್ಲಿ ಕೋವಿಡ್ -19 ಲಸಿಕೆ ಕಾರ್ಯಕ್ರಮವು ಇಂದು ಬೆಳಿಗ್ಗೆ 10 ರಿಂದ ನಡೆಯಲಿದೆ. 15ನೇ ವಾರ್ಡಿನ ಮತ್ತು ಸುತ್ತಮುತ್ತಲಿನ ವಾರ್ಡುಗಳ ಸಾರ್ವಜನಿಕರು ಲಸಿಕೆ ಕಾರ್ಯಕ್ರಮದ ಸದುಪಯೋಗ ಪಡಿಸಿಕೊಳ್ಳುವಂತೆ 15ನೇ ವಾರ್ಡಿನ ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಕೋರಿದ್ದಾರೆ.

# ಮಹಾರಾಷ್ಟ್ರದಲ್ಲಿ ಕೊರೊನಾ ವೇಗಕ್ಕೆ ತಡೆ

## ಎರಡನೇ ಅಲೆಯ ನಡುವೆ ಆಶಾಕಿರಣ

ನವದೆಹಲಿ, ಏ. 26 - ದೇಶದಲ್ಲಿ ನಿರಂತರವಾಗಿ ಎರಡನೇ ಕೊರೊನಾ ಅಲೆ ಉಲ್ಬಣಿಸುತ್ತಿರುವ ನಡುವೆ, ಮಹಾರಾಷ್ಟ್ರದಲ್ಲಿ ಆಶಾಕಿರಣ ಗೋಚರವಾಗುತ್ತಿದೆ.

ಕಳೆದ ಎರಡು ವಾರಗಳಿಂದ ರಾಜ್ಯದಲ್ಲಿ ಪ್ರತಿನಿತ್ಯ ಕಂಡು ಬರುತ್ತಿರುವ ಪ್ರಕರಣಗಳ ಸಂಖ್ಯೆ 60 ಸಾವಿರದ ಹಂತದಲ್ಲೇ ಇದೆ. ರಾಜ್ಯದಲ್ಲಿ ಫೆಬ್ರವರಿಯಲ್ಲಿ ಎರಡನೇ ಅಲೆ ಆರಂಭವಾದ ನಂತರ, ಸುದೀರ್ಘ ಅವಧಿಗೆ ಪ್ರಕರಣಗಳ ಸಂಖ್ಯೆ ಸ್ಥಿರವಾಗಿರುವುದು ಇದೇ ಮೊದಲು.

ಕಳೆದ ವಾರದಲ್ಲಿ ಪ್ರತಿದಿನ ಸರಾಸರಿ 65 ಸಾವಿರದಷ್ಟು ಪ್ರಕರಣಗಳು ಕಂಡು ಬರುತ್ತಿವೆ. ಇದೇ ಅವಧಿಯಲ್ಲಿ ಪ್ರತಿದಿನ ಸರಾಸರಿ 60 ಸಾವಿರದಷ್ಟು ಸೋಂಕಿತರು ಗುಣಮುಖರಾಗುತ್ತಿದ್ದಾರೆ. ಕಳೆದ ಕೆಲ ವಾರಗಳಿಂದ ಗುಣಮುಖರಾಗುವವರ ಸಂಖ್ಯೆ ಗಣನೀಯವಾಗಿ ಏರುತ್ತಿದೆ.

ಇದೇ ವೇಳೆಯಲ್ಲಿ ಕೊರೊನಾ ಹರಡುವ ವೇಗವೂ ಸಹ ಕಡಿಮೆಯಾಗುತ್ತಿದೆ. ಫೆಬ್ರವರಿಯಲ್ಲಿ ಕೊರೊನಾ ಹರಡುವ ವೇಗ 1.38 ಇದ್ದದ್ದು, ಈಗ 1.13ಕ್ಕೆ ಇಳಿದಿದೆ ಎಂದು ಚೆನ್ನೈನ ಇನ್‌ಸ್ಟಿಟ್ಯೂಟ್ ಆಫ್ ಮ್ಯಾಥಮೆಟಿಕಲ್ ಸೈನ್ಸಸ್‌ನ ಸಿತಾಬ್ರ ಸಿನ್ಹ ಅವರ ನೇತೃತ್ವದ ತಂಡ ವಿಶ್ಲೇಷಣೆ ಮಾಡಿದೆ.

1.38 ಎಂದರೆ ಪ್ರತಿ 100 ಸೋಂಕಿತರು, 138 ಜನರಿಗೆ ಕೊರೊನಾ ಸೋಂಕು ಹರಡುವುದು ಎಂದರ್ಥ. ಹೀಗಾಗಿ ಸೋಂಕು ಹರಡುವ ವೇಗ ಕಡಿಮೆಯಾದಷ್ಟೂ, ಕೊರೊನಾ ನಿಯಂತ್ರಣಕ್ಕೆ ಬರುತ್ತದೆ.

ಇಡೀ ಭಾರತದಲ್ಲಿ ಕೊರೊನಾ ಹರಡುವ ವೇಗ ಕಳೆದ ಎರಡು ತಿಂಗಳಿನಿಂದ 1.31ರ ಹಂತದಲ್ಲೇ ಇದೆ. ಮಹಾರಾಷ್ಟ್ರದಲ್ಲಿ ಮಾತ್ರ ಕೊರೊನಾ ಹರಡುವ ವೇಗ ಅತಿ ಹೆಚ್ಚಿನ ಮಟ್ಟಕ್ಕೆ ತಲುಪಿದ್ದು, ಕಳೆದ ಕೆಲ ದಿನಗಳಲ್ಲಿ ಇಳಿಮುಖವಾಗುತ್ತಿದೆ ಎಂದು ಸಿನ್ಹ ಹೇಳಿದ್ದಾರೆ.

ಕಳೆದ ವಾರ ಮುಂಬೈನಲ್ಲಿ ಕೊರೊನಾ ಹರಡುವ ವೇಗ 1ಕ್ಕಿಂತಲೂ ಕಡಿಮೆ ಇದೆ. ಇದರಿಂದಾಗಿ ನಗರದಲ್ಲಿ ಗಣನೀಯವಾಗಿ ಹೊಸ ಸೋಂಕಿತರ ಸಂಖ್ಯೆ ಕಡಿಮೆಯಾಗುತ್ತಿದೆ. ಕಳೆದ ಭಾನುವಾರದಂದು ಮುಂಬೈನಲ್ಲಿ 5,498 ಸೋಂಕಿತರು ಕಂಡು ಬಂದಿದ್ದರು. ಇದು ಎರಡು ವಾರಗಳಲ್ಲೇ ಅತಿ ಕಡಿಮೆಯಾಗಿದೆ.

ಪುಣೆಯಲ್ಲೂ ಸಹ ಹೊಸ ಪ್ರಕರಣಗಳ ಸಂಖ್ಯೆ ಹತ್ತು ಸಾವಿರದ ಹಂತದಲ್ಲಿ ಸ್ಥಿರವಾಗುತ್ತಿದೆ. ಆದರೆ, ಇದು ಆರಂಭಿಕ ಸೂಚನೆ ಮಾತ್ರ. ಮಹಾರಾಷ್ಟ್ರದಲ್ಲಿ ಮತ್ತೆ ಪ್ರಕರಣಗಳು ಉಲ್ಬಣಿಸಬಹುದು. ಇದಕ್ಕಾಗಿ ಎಚ್ಚರಿಕೆ ಅಗತ್ಯ ಎಂದು ಸಿನ್ಹ ಹೇಳಿದ್ದಾರೆ.

### ವಾಣಿಜ್ಯ ರಾಜಧಾನಿಯಲ್ಲಿ ಪರಿಸ್ಥಿತಿ ಸುಧಾರಣೆ


**ದೇಶದ ವಾಣಿಜ್ಯ ರಾಜಧಾನಿಯಾದ ಮುಂಬೈನಲ್ಲಿ ಕೊರೊನಾ ಪರಿಸ್ಥಿತಿ ದಿನೇ ದಿನೇ ಸುಧಾರಿಸುವ ಸಂಕೇತಗಳು ಸಿಗುತ್ತಿವೆ.**

**ಮುಂಬೈನಲ್ಲಿ ಕಳೆದ ಒಂದು ವಾರದಲ್ಲಿ ಸರಾಸರಿ ಏಳು ಸಾವಿರದಷ್ಟು ಪ್ರಕರಣಗಳು ಕಂಡು ಬರುತ್ತಿವೆ. ನಗರದಲ್ಲೀಗ ಸಕ್ರಿಯ ಸೋಂಕಿತರ ಸಂಖ್ಯೆ 75 ಸಾವಿರದಷ್ಟಿದೆ.**

**ಮತ್ತೊಂದೆಡೆ ಬೆಂಗಳೂರಿನಲ್ಲಿ ಕಳೆದ ವಾರದಲ್ಲಿ ಕಂಡು ಬಂದ ಸರಾಸರಿ ಸೋಂಕಿತರ ಸಂಖ್ಯೆ 15 ಸಾವಿರದಷ್ಟಿದೆ ಹಾಗೂ ಸಕ್ರಿಯ ಸೋಂಕಿತರ ಸಂಖ್ಯೆ 1.80 ಲಕ್ಷಕ್ಕೆ ತಲುಪಿದೆ. ಮುಂಬೈನಲ್ಲಿ ಸೋಂಕಿತರಿಗಿಂತ ಗುಣಮುಖರಾಗುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಕಳೆದ ಒಂದು ವಾರದಿಂದ ಪ್ರತಿದಿನ ಸರಾಸರಿ ಎಂಟು ಸಾವಿರದಷ್ಟು ಜನರು ಗುಣಮುಖರಾಗುತ್ತಿದ್ದಾರೆ.**

ದೇಶದಲ್ಲಿ ಕೊರೊನಾದ ಎರಡನೇ ಅಲೆ ಮೊದಲು ಕಂಡು ಬಂದಿದ್ದು ಮಹಾರಾಷ್ಟ್ರದಲ್ಲಿ. ಅಲ್ಲೀಗ ಹೊಸ ಪ್ರಕರಣಗಳ ಸಂಖ್ಯೆ ಸ್ಥಿರವಾಗುತ್ತಿರುವುದು, ಉಳಿದ ರಾಜ್ಯಗಳಿಗೂ ಭರವಸೆ ಮೂಡಿಸಬಹುದಾಗಿದೆ.

## ಸಾರ್ವಜನಿಕ ತಿಳುವಳಿಕೆ ನೋಟೀಸ್



**ಕೆ.ಸಿ. ರುದ್ರೇಶ ಅಣ್ಣಾಪುರ** ವಕೀಲರು ದಾವಣಗೆರೆ ಆದ ನಾನು ಸಾರ್ವಜನಿಕರಿಗೆ ಈ ಪತ್ರಿಕಾ ಪ್ರಕಟಣೆ ಮೂಲಕ ತಿಳಿಯಪಡಿಸುವುದೇನೆಂದರೆ, ದಾವಣಗೆರೆ ತಾ. ಶಾಮನೂರು ಗ್ರಾಮದಲ್ಲಿ **ಶಾಮನೂರು ಅಂಜನಪ್ಪ** ಎಂಬ ಹೆಸರಿನವರು ತುಂಬಾ ಜನರಿದ್ದು ಆದರೆ ನನ್ನ ಕಕ್ಷಿಗಾರರಾದ **ಶಾಮನೂರು ಶ್ರೀ ಕಣ್ಣಾಳ ಅಂಜಿನಪ್ಪ** ಬಿನ್ **ಬಸವರಾಜಪ್ಪ**, 43 ವರ್ಷ, ಅಂಬೇಡ್ಕರ್ ಬಡಾವಣೆ, 43ನೇ ವಾರ್ಡ್, ಶಾಮನೂರು ಗ್ರಾಮದ ವಾಸಿ ಇವರಿಗೂ ಮತ್ತು **ಶ್ರೀ ಅಮರನಾಥ ಕಾಸಲ್** ಎ.ವಿ.ಕೆ. ರಸ್ತೆ, ದಾವಣಗೆರೆ ಖ್ಯಾತ ರಿಯಲ್ ಎಸ್ಟೇಟ್ ಉದ್ದಿಮೆದಾರರು, ಇವರಿಬ್ಬರ ನಡುವೆ ಯಾವುದೇ ಜಮೀನು ಅಥವಾ ನಿವೇಶನದ ವ್ಯವಹಾರ ನಡೆದಿರುವುದಿಲ್ಲ ಹಾಗೂ ಈ ವಿಚಾರವಾಗಿ ಮನಸ್ತಾಪವಾಗಿರುತ್ತದೆ ಎಂಬ ಸುದ್ದಿ ಸಾರ್ವಜನಿಕವಾಗಿ ಹರಡಿದ್ದು ಅದು ಸತ್ಯಕ್ಕೆ ದೂರವಾಗಿರುತ್ತದೆ, ಇದರಿಂದಾಗಿ ನಮ್ಮ ಕಕ್ಷಿಗಾರರಿಗೆ ಮಾನಸಿಕ ಹಿಂಸೆ ಮತ್ತು ಘನತೆ, ಗೌರವಕ್ಕೆ ಧಕ್ಕೆಯುಂಟಾಗಿರುತ್ತದೆ. ಆದ್ದರಿಂದ ಅವರಿಬ್ಬರ ನಡುವೆ ವ್ಯವಹಾರವಾಗಲೀ ಅಥವಾ ಯಾವುದೇ ರೀತಿಯ ವ್ಯಾಜ್ಯ, ವಿರೋಧವಾಗಲೀ ಇರುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುತ್ತಿದ್ದೇನೆ.

ದಿನಾಂಕ : 26.04.2021
ದಾವಣಗೆರೆ

**ಕೆ.ಸಿ. ರುದ್ರೇಶ ಅಣ್ಣಾಪುರ,** ವಕೀಲರು
ಎ.ವಿ.ಕೆ. ಕಾಲೇಜ್ ರಸ್ತೆ, ದಾವಣಗೆರೆ.

## ಸಾರ್ವಜನಿಕ ಪ್ರಕಟಣೆಗಾಗಿ

ಈ ಕೆಳಕಂಡ ಪ್ರಕಟಣೆದಾರರಾದ ನಾನು ಈ ಮುಖೇನ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ:

ನಾನು ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ದಾವಣಗೆರೆ ಸಿಟಿ, ಶ್ರೀ ಆಂಜನೇಯ ಬಡಾವಣೆ, ನೇತ್ರಾವತಿ ಹಾಸ್ಟೆಲ್ ರಸ್ತೆ, ಮನೆ ನಂ. 3683/43 ರಲ್ಲಿನ ವಾಸಿಯಾದ **ಶ್ರೀ ಎನ್.ಹೆಚ್.ಹೆಚ್.ಬಿ. ಜಗಪತಿ ಬಿನ್ ಎನ್. ಪಟ್ಟಾಭಿರಾಮಯ್ಯ** ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಸದರಿ ಸಂಬಂಧವಾಗಿ ಈ ಕೆಳಗೆ ಸಹಿ ಮಾಡಲಾದ ಪ್ರಕಟಣೆದಾರರಾದ ನಾನು ಈ ಮೂಲಕ ಸಾರ್ವಜನಿಕರಿಗೆ ಹಾಗೂ ಹಣಕಾಸು ಸಂಸ್ಥೆಗಳಿಗೆ ತಿಳಿಯಪಡಿಸುವುದೇನೆಂದರೆ,

ಸದರಿ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾರದಾದರು ಹಕ್ಕು-ಬಾಧ್ಯತೆ, ತಂಟೆ-ತಕರಾರು ಇದ್ದಲ್ಲಿ ಅಥವಾ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾವುದೇ ಹಣಕಾಸಿನ ಸಂಸ್ಥೆಯು ಈಗಾಗಲೇ ವ್ಯವಹರಿಸಿದ್ದಲ್ಲಿ/ವ್ಯವಹರಿಸುವ ಹಂತದಲ್ಲಿದ್ದಲ್ಲಿ ಈ ಕೂಡಲೇ ಪ್ರಕಟಣೆದಾರನನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ಈ ಪ್ರಕಟಣೆಯಾದ 15 (ಹದಿನೈದು) ದಿನಗಳ ಒಳಗಾಗಿ ಯಾವುದೇ ತಕರಾರು ಅರ್ಜಿ ಬಾರದೇ ಹೋದಲ್ಲಿ ಮುಂದೆ ಆಗುವ ತೊಂದರೆಗಳಿಗೆ ತಾವೇ ಕಾನೂನು ರೀತ್ಯಾ ಜವಾಬ್ದಾರರು ಆಗಿರುತ್ತೀರಿ ಮತ್ತು ತಾವೇ ಖುದ್ದು ಜವಾಬ್ದಾರರು ಎಂದು ತಿಳಿಯುವುದು.

**ಷೆಡ್ಯೂಲ್**

ದಾವಣಗೆರೆ ಸಬ್-ರಿಜಿಸ್ಟ್ರಾರ್‌ರವರ ಆಫೀಸ್ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಶಾಮನೂರು ಗ್ರಾಮದ ರಿ.ಸರ್ವೆ ನಂ.108/1ಎ3ಬಿ, ವಿಸ್ತೀರ್ಣ ಎಕರೆ -00, ಗುಂಟೆ -04¼ ವುಳ್ಳ ಜಮೀನನ್ನು ವಾಸೋಪಯೋಗಕ್ಕಾಗಿ ಅಲಿನೇಷನ್ ಆಗಿದ್ದು, ಹಾಲಿ ದಾವಣಗೆರೆ ಸಿಟಿ, ಸಿದ್ದವೀರಪ್ಪ ಬಡಾವಣೆ, 10ನೇ ಕ್ರಾಸ್, ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂ.1719 ರ ಇದರ ಅಳತೆ 60x61.6 ಅಡಿ ಪೈಕಿ ಪೂರ್ವ ಭಾಗದ ಕಡೆಗೆ ಬರತಕ್ಕ ಸೈಟಿನ ಅಳತೆ 44x61.6 ಅಡಿವುಳ್ಳ ಖಾಲಿ ಸೈಟಿಗೆ ಚೆಕ್ಕುಬಂದಿ:

**ಪೂರ್ವಕ್ಕೆ :** ನಾಗಮ್ಮನವರ ಸೊತ್ತು. **ಪಶ್ಚಿಮಕ್ಕೆ :** ಇದೇ ಡೋರ್ ನಂಬರ್ ಪೈಕಿ ಮೇಕಾ ಮುರಳಿಕೃಷ್ಣ ಇವರು ಕ್ರಯಕ್ಕೆ ಪಡೆದ ಸೊತ್ತು. **ಉತ್ತರಕ್ಕೆ :** 10ನೇ ಕ್ರಾಸ್ ರಸ್ತೆ. **ದಕ್ಷಿಣಕ್ಕೆ :** 9ನೇ ಕ್ರಾಸ್ ರಸ್ತೆ.

**ಶ್ರೀ ನವೀನ್‌ಕುಮಾರ್ ಸಿ.ಪಿ. ಬಿನ್ ಕೆ.ಪುಟ್ಟಪ್ಪ**
ವಾಸ: ಮನೆ ನಂ.198, 6ನೇ ಕ್ರಾಸ್ 'ಸಿ' ಬ್ಲಾಕ್, ದೇವರಾಜ್ ಅರಸ್ ಲೇಔಟ್, ದಾವಣಗೆರೆ.
**ಫೋನ್ ನಂ. 9482047400, 79754 53527**



ಸೋಮವಾರ ದಾವಣಗೆರೆಯ ಕೆ.ಆರ್. ಮಾರುಕಟ್ಟೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ನೆರೆದಿದ್ದರು. ಅಗತ್ಯ ವಸ್ತುಗಳ ಖರೀದಿ ಜೋರಾಗಿತ್ತು.

# ಸತ್ತವರಲ್ಲಿ ತಡವಾಗಿ ಆಸ್ಪತ್ರೆಗೆ ಬಂದವರೇ ಹೆಚ್ಚು

## ಕೋವಿಡ್ ಗುಣ ಲಕ್ಷಣಗಳು ಕಂಡ ತಕ್ಷಣ ಸೂಕ್ತ ಚಿಕಿತ್ಸೆ ಪಡೆಯಲು ವೈದ್ಯರ ಸಲಹೆ

ದಾವಣಗೆರೆ, ಏ. 26- ಕೋವಿಡ್ ರೋಗವನ್ನು ಬೇಗ ಪತ್ತೆ ಹಚ್ಚಿದಲ್ಲಿ, ರೋಗಿಯ ಮರಣ ಸಾಧ್ಯತೆಯನ್ನು ಕಡಿಮೆಗೊಳಿಸಬಹುದು. ತಡವಾಗಿ ಆಸ್ಪತ್ರೆಗೆ ದಾಖಲಾಗುವವರಲ್ಲಿಯೇ ಹೆಚ್ಚಿನ ಮರಣ ಪ್ರಕರಣಗಳು ವರದಿಯಾಗಿದ್ದು, ಹೀಗಾಗಿ ರೋಗ ಲಕ್ಷಣ ಕಂಡುಬಂದಲ್ಲಿ ಕೂಡಲೇ ಕೋವಿಡ್ ಪರೀಕ್ಷೆ ಮಾಡಿಸಿಕೊಂಡು, ತಜ್ಞ ವೈದ್ಯರ ಸಲಹೆಯಂತೆ ಸೂಕ್ತ ಚಿಕಿತ್ಸೆ ಪಡೆಯಲು ಮುಂದಾಗಬೇಕು ಎಂದು ಬಹುತೇಕ ತಜ್ಞ ವೈದ್ಯರು ಅಭಿಪ್ರಾಯಪಟ್ಟರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಲಾಗಿದ್ದ ಕೋವಿಡ್ ಜಿಲ್ಲಾ ತಜ್ಞ ವೈದ್ಯರ ಸಲಹಾ ಸಮಿತಿ ಸಭೆಯಲ್ಲಿ ಭಾಗವಹಿಸಿದ್ದ ತಜ್ಞ ವೈದ್ಯರು, ಜಿಲ್ಲೆಯಲ್ಲಿ ಕೋವಿಡ್‌ನಿಂದ ಸಂಭವಿಸುವ ಮರಣ ಪ್ರಕರಣಗಳನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಬರುವ 15 ದಿನಗಳಲ್ಲಿ ಕೋವಿಡ್ ಪ್ರಕರಣಗಳು ಎಷ್ಟಾಗಬಹುದು. ಇದಕ್ಕಾಗಿ ಜಿಲ್ಲೆಯಲ್ಲಿ ಕೈಗೊಳ್ಳಬೇಕಾದ ಸಿದ್ಧತೆಗಳ ಕುರಿತು ತಜ್ಞ ವೈದ್ಯರ ಸಲಹಾ ಸಮಿತಿ ಸಭೆಯಲ್ಲಿ ಚರ್ಚೆ ನಡೆಸಲಾಯಿತು.

ಕೋವಿಡ್ 2ನೇ ಅಲೆಯಲ್ಲಿ ರೋಗಲಕ್ಷಣಗಳೂ ಕೂಡ ಕೆಲವು ರೋಗಿಗಳನ್ನು ಭಿನ್ನವಾಗಿ ಕಂಡುಬಂದಿವೆ. ಸಾಮಾನ್ಯವಾಗಿ ಜ್ವರ, ನೆಗಡಿ, ಕೆಮ್ಮು ಮುಂತಾದ ರೋಗಲಕ್ಷಣಗಳು ಕೋವಿಡ್‌ನ ಆರಂಭಿಕ ಹಂತದಲ್ಲಿ ಕಂಡುಬಂದಿತ್ತು. ಆದರೆ ಇತ್ತೀಚಿನ ಪ್ರಕರಣಗಳನ್ನು ಗಮನಿಸಿದಾಗ, ಜ್ವರ ಇಲ್ಲದಂತಹ ಪ್ರಕರಣಗಳು, ವಾಂತಿಬೇಧಿ, ಕಣ್ಣು ಕೆಂಪಾಗುವುದು, ತಲೆನೋವು, ಮೈಕೈನೋವು ರೋಗ ಲಕ್ಷಣಗಳು ಇರುವುದು ಕಂಡುಬಂದಿದೆ.

ಸಾರ್ವಜನಿಕರು ರೋಗ ಲಕ್ಷಣಗಳು ಕಂಡುಬಂದಲ್ಲಿ ಕೂಡಲೇ ಆರ್‌ಟಿಪಿಸಿಆರ್ ಟೆಸ್ಟ್ ಮಾಡಿಸಿಕೊಳ್ಳಬೇಕು, ಸೋಂಕು ದೃಢಪಟ್ಟಲ್ಲಿ ಆತಂಕಕ್ಕೆ ಒಳಗಾಗದೆ ತಜ್ಞ ವೈದ್ಯರ ಶಿಫಾರಸ್ಸಿನಂತೆ ಚಿಕಿತ್ಸೆ ಪಡೆದುಕೊಳ್ಳಬೇಕು. ಬೇಗ ರೋಗ ಪತ್ತೆಯಾದಲ್ಲಿ, ಚಿಕಿತ್ಸೆ ಪಡೆದು ಬೇಗ ಗುಣಮುಖರಾಗಬಹುದು. ಆದರೆ ರೋಗ ಪತ್ತೆ ಮಾಡಿಸಿಕೊಳ್ಳದೆ, ಸೋಂಕು ಉಲ್ಬಣಗೊಂಡು, ಶ್ವಾಸಕೋಶದಲ್ಲಿ ಸೋಂಕು ತೀವ್ರಗೊಂಡು, ತಡವಾಗಿ ಆಸ್ಪತ್ರೆಗೆ ಬರುವುದು ರೋಗಿಗಳ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಸಾಮಾನ್ಯವಾಗಿ ಕೋವಿಡ್‌ನಿಂದ ಮರಣ ಪ್ರಕರಣಗಳನ್ನು ವಿಶ್ಲೇಷಿಸಿದಾಗ, ತಡವಾಗಿ ಆಸ್ಪತ್ರೆಗೆ ಬಂದವರಲ್ಲೇ ಹೆಚ್ಚಿನ ಮರಣ ಸಂಭವಿಸಿದೆ ಎಂದು ತಜ್ಞ ವೈದ್ಯರು ಹೇಳಿದರು.

**ಹೆಚ್ಚುವರಿ ಆಂಬ್ಯುಲೆನ್ಸ್ ಖರೀದಿಗೆ ಆದೇಶ :** ಜಿಲ್ಲೆಯಲ್ಲಿ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳು ಆಂಬ್ಯುಲೆನ್ಸ್‌ಗಳನ್ನು ಬೇಕಾಬಿಟ್ಟಿಯಾಗಿ ಬಳಸಬಾರದು. ತಜ್ಞ ವೈದ್ಯರ ಸಲಹಾ ಸಮಿತಿಯ ಶಿಫಾರಸಿನಂತೆ, ಮುಂಬರುವ ದಿನಗಳಲ್ಲಿ ಕೋವಿಡ್ ಪ್ರಕರಣಗಳ ಸಮರ್ಪಕ ನಿರ್ವಹಣೆಗಾಗಿ ಜಿಲ್ಲೆಗೆ 1 ಅಡ್ವಾನ್ಸ್ಡ್ ಲೈಫ್ ಸಪೋರ್ಟ್ ಕೇರ್ ಸಿಸ್ಟಂ ಹೊಂದಿರುವ ಆಂಬ್ಯುಲೆನ್ಸ್, 2- ಬೇಸಿಕ್ ಲೈಫ್ ಸಪೋರ್ಟ್ ಸಿಸ್ಟಂ ಇರುವ ಆಂಬ್ಯುಲೆನ್ಸ್ ಹಾಗೂ ಪ್ರತಿ ತಾಲ್ಲೂಕಿಗೆ ಒಂದು ಲೈಫ್ ಸಪೋರ್ಟ್ ಸಿಸ್ಟಂ ಆಂಬ್ಯುಲೆನ್ಸ್ ಖರೀದಿಸಲು ಆದೇಶ ನೀಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

**ಏ. 27 ರಿಂದ ಮೋತಿವೀರಪ್ಪ ಕಾಲೇಜಿನಲ್ಲಿ ಲಸಿಕೆ :** ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಇದುವರೆಗೂ ಕೋವಿಡ್ ನಿರೋಧಕ ಲಸಿಕೆ ನೀಡಲಾಗುತ್ತಿತ್ತು. ಆದರೆ ಏ. 27 ರಿಂದ ಜಿಲ್ಲಾ ಆಸ್ಪತ್ರೆ ಸಮೀಪದ ಮೋತಿ ವೀರಪ್ಪ ಕಾಲೇಜಿನಲ್ಲಿ ಕೋವಿಡ್ ಸೇರಿದಂತೆ ಎಲ್ಲ ಬಗೆಯ ಲಸಿಕೆಗಳನ್ನು ನೀಡಲು ನಿರ್ಧಾರ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

**ಶೇ. 75 ಹಾಸಿಗೆಗಳು ಕೋವಿಡ್‌ಗೆ ಮೀಸಲು :** ಜಿಲ್ಲೆಯ ಎಲ್ಲ ಖಾಸಗಿ ಆಸ್ಪತ್ರೆಗಳು, ಮೆಡಿಕಲ್ ಕಾಲೇಜುಗಳು ತಮ್ಮ ಹಾಸಿಗೆ ಸಾಮರ್ಥ್ಯದಲ್ಲಿ ಶೇ. 75 ರಷ್ಟು ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗೆ ಮೀಸಲಿಡುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಆದೇಶ ಹೊರಡಿಸಿದ್ದು, ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ಡಿಹೆಚ್‌ಓ ಅವರು, ಎಲ್ಲ ಆಸ್ಪತ್ರೆಗಳು ಸರ್ಕಾರದ ಸೂಚನೆ ಹಾಗೂ ಕೋವಿಡ್‌ನ ಎಲ್ಲ ಪ್ರೋಟೋಕಾಲನ್ನು ಪಾಲನೆ ಮಾಡುತ್ತಿರುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಬೇಕು ಎಂದು ಡಿಸಿ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾಸ್ಪತ್ರೆ ಸರ್ಜನ್ ಡಾ. ಜಯಪ್ರಕಾಶ್, ಜಿಲ್ಲಾ ಕೋವಿಡ್ ನೋಡಲ್ ಅಧಿಕಾರಿ ಪ್ರಮೋದ್ ನಾಯಕ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್, ಡಿಹೆಚ್‌ಓ ಡಾ. ನಾಗರಾಜ್, ತಜ್ಞ ವೈದ್ಯರ ಸಮಿತಿ ಸದಸ್ಯರುಗಳಾದ ಡಾ. ರವಿ, ಡಾ. ಬಿ. ಎಸ್. ಪ್ರಸಾದ್, ಡಾ. ಶಿವಕುಮಾರ್, ಡಾ. ಅರುಣ್‌ಕುಮಾರ್ ಸೇರಿದಂತೆ ವಿವಿಧ ತಜ್ಞ ವೈದ್ಯರು ಪಾಲ್ಗೊಂಡಿದ್ದರು.



### ರೆಮ್‌ಡೆಸಿವಿರ್ ಔಷಧ ದುರ್ಬಳಕೆಗೆ ಕಡಿವಾಣ

ಜಿಲ್ಲೆಯಲ್ಲಿ ರೆಮ್‌ಡೆಸಿವಿರ್ ಚುಚ್ಚುಮದ್ದು ಅಕ್ರಮ ಬಳಕೆಗೆ ಕಡಿವಾಣ ಹಾಕಲಾಗುತ್ತಿದ್ದು, ಈಗಾಗಲೇ ಅಕ್ರಮ ಎಸಗಿದ 2 ಪ್ರಕರಣಗಳಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗಿದೆ. ರೆಮ್‌ಡೆಸಿವಿರ್ ಚುಚ್ಚುಮದ್ದನ್ನು ಕೋವಿಡ್ ನಿಗದಿತ ಆಸ್ಪತ್ರೆಯಲ್ಲಿ, ಅಗತ್ಯವಿರುವ ರೋಗಿಗೆ ಮಾತ್ರ ನೀಡಬೇಕು. ಕೋವಿಡ್ ಸೋಂಕಿತ ಎಲ್ಲ ರೋಗಿಗಳಿಗೂ ನೀಡಬಾರದು. ರೆಮ್‌ಡೆಸಿವಿರ್ ಔಷಧಿಯನ್ನು ಬೇಕಾಬಿಟ್ಟಿಯಾಗಿ ಶಿಫಾರಸ್ಸು ಮಾಡುವವರ ವಿರುದ್ಧ ಕೆಪಿಎಂಇ ಕಾಯ್ದೆ ಅನ್ವಯ ವೈದ್ಯಕೀಯ ಲೈಸೆನ್ಸ್ ರದ್ದುಪಡಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

### ವಿದೇಶಿ ಪ್ರಯಾಣಿಕರಿಗೆ ಖಾಸಗಿಯಲ್ಲಿ ಟೆಸ್ಟ್

ವಿದೇಶಕ್ಕೆ ತೆರಳಬಯಸುವವರು ಅಥವಾ ಬೇರೆ ಬೇರೆ ರಾಜ್ಯಗಳಿಗೆ ಪ್ರಯಾಣ ಬೆಳೆಸುವವರು ಕೋವಿಡ್ ಟೆಸ್ಟ್ ಮಾಡಿಸಿಕೊಳ್ಳಲು ಬಯಸಿದಲ್ಲಿ, ಅಂತಹವರಿಗೆ ಸರ್ಕಾರಿ ಆಸ್ಪತ್ರೆ, ಸಂಸ್ಥೆಗಳಲ್ಲಿ ಕೋವಿಡ್ ಟೆಸ್ಟ್ ಮಾಡಬಾರದು. ಅಂತಹವರು ಅಗತ್ಯವೆನಿಸಿದಲ್ಲಿ ನಿಗದಿತ ಖಾಸಗಿ ಆಸ್ಪತ್ರೆ, ಪ್ರಯೋಗಾಲಯಗಳಲ್ಲಿ ಟೆಸ್ಟ್ ಮಾಡಿಸಿಕೊಳ್ಳಲಿ. ಕೋವಿಡ್ ಟೆಸ್ಟ್ ಅನ್ನು ಅನಗತ್ಯವಾಗಿ ಎಲ್ಲರಿಗೂ ಮಾಡಬಾರದು. ರೋಗ ಲಕ್ಷಣಗಳು ಕಂಡುಬಂದವರಿಗೆ, ಸೋಂಕಿತರ ಪ್ರಾಥಮಿಕ ಸಂಪರ್ಕಿತರಿಗೆ ಹಾಗೂ ತಜ್ಞ ವೈದ್ಯರು ಶಿಫಾರಸ್ಸು ಮಾಡುವವರಿಗೆ ಮಾತ್ರ ಕೋವಿಡ್ ಟೆಸ್ಟ್ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

# ಕೊರೊನಾದ ಅನಗತ್ಯ ಆತಂಕ ಬೇಡ

## ಆಕ್ಸಿಜನ್ ಅಗತ್ಯ ಪ್ರಮಾಣದಲ್ಲಿದೆ, ಪೂರೈಕೆಯದ್ದೇ ಸವಾಲು : ಕೇಂದ್ರ

ನವದೆಹಲಿ, ಏ. 26 – ಕೊರೊನಾ ಎರಡನೇ ಅಲೆ ಹಿನ್ನೆಲೆಯಲ್ಲಿ ಜನರು ಆತಂಕ ಪಡಬಾರದು ಎಂದಿರುವ ಕೇಂದ್ರ ಸರ್ಕಾರ, ಅನಗತ್ಯವಾಗಿ ಆತಂಕಕ್ಕೆ ಗುರಿಯಾಗುವುದರಿಂದ ಒಳ್ಳೆಯದಕ್ಕಿಂತ ಕೆಡುಕೇ ಹೆಚ್ಚಾಗಲಿದೆ ಎಂದಿದೆ.

ಲಸಿಕೆ ಹಾಗೂ ಕೊರೊನಾ ಶಿಷ್ಟಾಚಾರಗಳನ್ನು ಪಾಲಿಸುವ ಅಗತ್ಯವನ್ನು ಒತ್ತಿ ಹೇಳಿರುವ ಕೇಂದ್ರ ಸರ್ಕಾರ, ಮನೆಯಲ್ಲಿ ಸೋಂಕಿತರಿದ್ದರೆ ಮನೆಯಲ್ಲಿರುವಾಗಲೂ ಮಾಸ್ಕ್ ಧರಿಸಬೇಕು ಎಂದು ತಿಳಿಸಿದೆ.

ಲಸಿಕೆ ಅಭಿಯಾನ ತ್ವರಿತಗೊಳಿಸಲು ಒತ್ತು ನೀಡಿರುವ ಕೇಂದ್ರ ಸರ್ಕಾರ, ಮಹಿಳೆಯರು ಋತುಮತಿಯಾದ ದಿನಗಳಲ್ಲೂ ಸಹ ಲಸಿಕೆ ಪಡೆಯಬಹುದು ಎಂದು ಸ್ಪಷ್ಟಪಡಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ ಅಗರ್‌ವಾಲ್, ಹಲವರು ಆತಂಕದ ಕಾರಣದಿಂದಾಗಿಯೇ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ವೈದ್ಯರ ಸಲಹೆಯ ಮೇರೆಗೆ ಮಾತ್ರ ಆಸ್ಪತ್ರೆಗೆ ದಾಖಲಾಗಬೇಕು ಎಂದಿದ್ದಾರೆ.

ದೇಶದಲ್ಲಿ ಸಾಕಷ್ಟು ಪ್ರಮಾಣದ ವೈದ್ಯಕೀಯ ಆಕ್ಸಿಜನ್ ಲಭ್ಯವಿದೆ. ಆದರೆ, ಅದನ್ನು ಆಸ್ಪತ್ರೆಗಳಿಗೆ ಸಾಗಣೆ ಮಾಡುವುದೇ ಸವಾಲಾಗಿದೆ ಎಂದು ಹೇಳಿರುವ ಅಗರ್‌ವಾಲ್, ಆಸ್ಪತ್ರೆಗಳಿಗೆ ಸಮರ್ಪಕ ಆಕ್ಸಿಜನ್ ಪೂರೈಕೆಯಾಗುವಂತೆ ಮಾಡಲು ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ. ವಿ.ಕೆ. ಪೌಲ್, ಮನೆಯಲ್ಲಿ ಕೊರೊನಾ ಸೋಂಕಿತರಿದ್ದರೆ ಅವರು ಹಾಗೂ ಇತರರು ಮಾಸ್ಕ್ ಧರಿಸಬೇಕು ಎಂದು ಹೇಳಿದ್ದಾರೆ.

ಈಗ ಮನೆಯೊಳಗಿದ್ದರೂ ಮಾಸ್ಕ್ ಧರಿಸುವ ಸಮಯ ಬಂದಿದೆ. ಬೇರೆಯವರ ಜತೆ ಇದ್ದಾಗ ಮಾಸ್ಕ್ ಧರಿಸಬೇಕು. ಮನೆಯಿಂದ ಅನಗತ್ಯವಾಗಿ ಹೊರ ಹೋಗುವುದು ಹಾಗೂ ಅತಿಥಿಗಳನ್ನು ಆಹ್ವಾನಿಸುವುದನ್ನು ಬಿಡಬೇಕು ಎಂದೂ ಅವರು ಹೇಳಿದ್ದಾರೆ.

ಕೊರೊನಾ ಸೋಂಕಿತರು ಮನೆಯಲ್ಲಿ ಪ್ರತ್ಯೇಕವಾಗಿರಬೇಕು. ಅದಕ್ಕೆ ವ್ಯವಸ್ಥೆ ಇಲ್ಲವಾದರೆ ಕೊರೊನಾ ಕಾಳಜಿ ಕೇಂದ್ರಕ್ಕೆ ತೆರಳಬೇಕು. ಆದರೆ, ಸೋಂಕಿತರು ಆಸ್ಪತ್ರೆಗೆ ತೆರಳುವುದೊಂದೇ ಮಾರ್ಗವಲ್ಲ. ಆಸ್ಪತ್ರೆಗಳನ್ನು ಅಗತ್ಯವಿರುವ ವ್ಯಕ್ತಿಗಳಿಗೆ ಮಾತ್ರ ಮೀಸಲಿಡಬೇಕು ಎಂದು ಪೌಲ್ ಹೇಳಿದ್ದಾರೆ.

## ಮೇ 8ರಿಂದ 'ಸುಪ್ರೀಂ'ಗೆ ಬೇಸಿಗೆ ರಜೆ

ನವದೆಹಲಿ ಏ. 26 – ಕೊರೊನಾ ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ, ಬೇಸಿಗೆ ರಜೆಯನ್ನು ಮೇ 8ರಿಂದಲೇ ಆರಂಭಿಸಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ. ನಿಗದಿಗಿಂತ ಒಂದು ವಾರ ಮೊದಲು ಸುಪ್ರೀಂ ಕೋರ್ಟ್‌ನ ಬೇಸಿಗೆ ರಜೆ ಆರಂಭವಾಗಲಿದೆ. ಸುಪ್ರೀಂ ಕೋರ್ಟ್ ವಕೀಲರ ಒಕ್ಕೂಟಗಳ ಜೊತೆ ಸಭೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಈ ಬಗ್ಗೆ ನಿರ್ಧಾರ ತೆಗೆದುಕೊಂಡಿದ್ದಾರೆ.

ನಂತರ ಈ ಬಗ್ಗೆ ವಿವರ ನೀಡಿರುವ ವಕೀಲರ ಒಕ್ಕೂಟವಾದ ಎಸ್.ಸಿ.ಬಿ.ಎ. ಅಧ್ಯಕ್ಷ ವಿಕಾಸ್ ಸಿಂಗ್, ಮೇ 14ರ ಬದಲು ಮೇ 8ರಿಂದಲೇ ರಜೆ ಆರಂಭವಾಗಲಿದೆ. ಜೂನ್ 27ರಂದು ರಜೆ ಮುಗಿಯಲಿದೆ ಎಂದಿದ್ದಾರೆ.

ಸುಪ್ರೀಂ ಕೋರ್ಟ್‌ನ ನೂತನ ಛೇಂಬರ್ ಕಟ್ಟಡದಲ್ಲಿ ಕೋವಿಡ್ ಕೇರ್ ಸೆಂಟರ್ ತೆರೆಯಲೂ ಸಹ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ತಾತ್ವಿಕ ಒಪ್ಪಿಗೆ ನೀಡಿದ್ದಾರೆ ಎಂದವರು ತಿಳಿಸಿದ್ದಾರೆ.

## ಹರಿಹರದಲ್ಲಿ ಜಾನುವಾರು ಸಂತೆ ರದ್ದು

ಹರಿಹರ, ಏ.26- ಕೊರೊನಾ ವೈರಸ್ ಸೋಂಕು ಹರಡದಂತೆ ಹಾಗೂ ಸಾರ್ವಜನಿಕ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ ಹೆಚ್ಚು ಜನರು ಸೇರುವಂತಹ ಸ್ಥಳಗಳಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಹರಿಹರ ತಹಶೀಲ್ದಾರರು ಸೂಚನೆ ನೀಡಿರುವ ಅನುಸಾರ ಹರಿಹರ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಪ್ರತಿ ಮಂಗಳವಾರ ಜರುಗುವ ಜಾನುವಾರು (ಕುರಿ ಮತ್ತು ಮೇಕೆ) ಸಂತೆಯನ್ನು ಸರ್ಕಾರದ ಮುಂದಿನ ಆದೇಶದವರೆಗೆ ರದ್ದುಗೊಳಿಸಲಾಗಿದೆ.

ಕುರಿ ಮತ್ತು ಮೇಕೆ ಹಾಗೂ ಜಾನುವಾರುಗಳನ್ನು ರೈತಬಾಂಧವರು ಮಾರಾಟಕ್ಕೆ ತರಬಾರದು. ಖರೀದಿದಾರರು, ಮಾರಾಟಗಾರರು, ಸಾರ್ವಜನಿಕರು ಸಹಕರಿಸಬೇಕೆಂದು ಕೃಷಿ ಉತ್ಪನ್ನ ಮಾರುಕಟ್ಟೆ ಕಾರ್ಯದರ್ಶಿ ತಿಳಿಸಿದ್ದಾರೆ.

## ನಿರ್ಮಾಪಕ ರಾಮು ನಿಧನ



ಬೆಂಗಳೂರು, ಏ.26 - ಚಲನಚಿತ್ರ ನಿರ್ಮಾಪಕ, ನಟಿ ಮಾಲಾಶ್ರೀ ಅವರ ಪತಿ ರಾಮು ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಇಂದು ರಾತ್ರಿ 8-30 ಕ್ಕೆ ನಿಧನರಾದರು. ರಾಮು ನಿಧನಕ್ಕೆ ದಾವಣಗೆರೆ ಸಿನಿಮಾ ಸಿರಿ ಸಂತಾಪ ವ್ಯಕ್ತಪಡಿಸಿದೆ.

# 5 ಲಕ್ಷ ರೂ. ಲಂಚ : ಎಸಿಬಿ ಬಲೆಗೆ ಪಿಡಿಓ

ಹೊನ್ನಾಳಿ, ಏ.26- ಜಮೀನು ಖಾತೆ ಬದಲಿಸಲು 5 ಲಕ್ಷ ರೂ. ಲಂಚ ಪಡೆಯುತ್ತಿದ್ದ ಪಿಡಿಓ ಹಾಗೂ ಸ್ವಚ್ಛತಾ ಸಿಬ್ಬಂದಿ ಸೋಮವಾರ ಎಸಿಬಿ ಬಲೆಗೆ ಬಿದ್ದಿರುವ ಘಟನೆ ನಡೆದಿದೆ.


ತಾಲ್ಲೂಕಿನ ಹಿರೇಗೋಣಿಗೆರೆ ಮತ್ತು ಎಚ್. ಕಡದಕಟ್ಟೆ ಗ್ರಾಪಂ ಪಿಡಿಓ ಕೆ. ಅರುಣ್ ಹಾಗೂ ಎಚ್. ಕಡದಕಟ್ಟೆ ಗ್ರಾಪಂ ಸ್ವಚ್ಛತಾ ಸಿಬ್ಬಂದಿ ಚನ್ನಪ್ಪ ಬಂಧಿತ ಆರೋಪಿಗಳು.

ಎಚ್. ಕಡದಕಟ್ಟೆ ಗ್ರಾಪಂ ವ್ಯಾಪ್ತಿಯ ಹಿರೇಮಠ ಗ್ರಾಮದ ಸರ್ವೇ ನಂ. 59/2ರ ಒಂದೂವರೆ ಎಕರೆ ಜಮೀನನ್ನು ತಮ್ಮ ತಂದೆಯ ಹೆಸರಿನಿಂದ ತಾಯಿಯ ಹೆಸರಿಗೆ ವರ್ಗಾಯಿಸಿ ಖಾತೆ ಮಾಡಿಕೊಡುವಂತೆ ಕಿರಣ್‌ಕುಮಾರ್ ಅರ್ಜಿ ಸಲ್ಲಿಸಿದ್ದರು.

**11 ಸೈಟ್‌ಗಳಿಗೆ ಬೇಡಿಕೆ ಇಟ್ಟಿದ್ದ ಪಿಡಿಓ**

ಖಾತೆ ಮಾಡಿಕೊಡಲು ಕಿರಣ್‌ಕುಮಾರ್ ಪಿಡಿಓ ಅರುಣ್‌ಗೆ 2021ರ ಮಾರ್ಚ್ 5ರಂದು ಮುಂಗಡವಾಗಿ 2 ಲಕ್ಷ ರೂ.ಗಳನ್ನು ನೀಡಿದ್ದರು. ಆದರೆ, ಖಾತೆ ಮಾಡಿಕೊಡಲು ಸತಾಯಿಸುತ್ತಿದ್ದ ಪಿಡಿಓ ಕೆ. ಅರುಣ್, ತಮಗೆ ಆ ಜಮೀನಿನಲ್ಲಿ 11 ಸೈಟುಗಳನ್ನು ನೀಡಬೇಕು ಎಂಬ ಬೇಡಿಕೆ ಇಟ್ಟಿದ್ದರು. ಇದಕ್ಕೊಪ್ಪದ ಕಿರಣ್‌ಕುಮಾರ್ 8 ಲಕ್ಷ ರೂ.ಗಳನ್ನು ನೀಡುವುದಾಗಿ ತಿಳಿಸಿದ್ದರು.

ಹಣದ ಮೊದಲ ಕಂತಾಗಿ 5 ಲಕ್ಷ ರೂ.ಗಳನ್ನು ಸೋಮವಾರ ಹೊನ್ನಾಳಿ ಪಟ್ಟಣದ ದುರ್ಗಿಗುಡಿ ಬಡಾವಣೆಯ ಗಂಗಾ ಸಾಮಿಲ್ ಬಳಿ ನೀಡುವುದಾಗಿ ಕಿರಣ್‌ಕುಮಾರ್ ತಿಳಿಸಿದ್ದರು. ಆದರೆ, ಪಿಡಿಓ ಕೆ. ಅರುಣ್ ಲಂಚದ ಹಣ ಪಡೆದುಕೊಳ್ಳಲು ಸ್ವಚ್ಛತಾ ಸಿಬ್ಬಂದಿ ಚನ್ನಪ್ಪಗೆ ಸೂಚಿಸಿದ್ದರು. ಕಿರಣ್‌ಕುಮಾರ್ 5 ಲಕ್ಷ ರೂ.ಗಳನ್ನು ಚನ್ನಪ್ಪಗೆ ನೀಡುವಾಗ ತಮ್ಮ ಸಿಬ್ಬಂದಿಯೊಂದಿಗೆ ಎಸಿಬಿ ಡಿವೈಎಸ್ಪಿ ಎಂ. ಪ್ರವೀಣ್ ದಾಳಿ ನಡೆಸಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಪಿಡಿಓ ಕೆ. ಅರುಣ್ ಹಾಗೂ ಸ್ವಚ್ಛತಾ ಸಿಬ್ಬಂದಿ ಚನ್ನಪ್ಪ ಇಬ್ಬರಿಗೂ ಹೊನ್ನಾಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೊರೊನಾ ಪರೀಕ್ಷೆ ಮಾಡಿಸಲಾಯಿತು. ಬಳಿಕ ದಾವಣಗೆರೆ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಹಾಜರು ಪಡಿಸುವುದಾಗಿ ತಿಳಿಸಿದ್ದಾರೆ.

ದಾಳಿ ವೇಳೆ ಎಸಿಬಿ ಇನ್ಸ್‌ಪೆಕ್ಟರ್ ಸಿ. ಮಧುಸೂದನ್, ಸಿಬ್ಬಂದಿ ಎನ್.ಪಿ. ಮೋಹನ್, ಧನರಾಜ್, ಕಲ್ಲೇಶ್, ವೀರೇಶ್, ಆಂಜನೇಯ, ಬಸವರಾಜು, ವಿನಾಯಕ, ನಾಗರಾಜು ಉಪಸ್ಥಿತರಿದ್ದರು.

ಇಬ್ಬರನ್ನು ಕೊರೊನಾ ಪರೀಕ್ಷೆಯ ನಂತರ ಸೊಮವಾರ ಸಂಜೆ 6 ಗಂಟೆಗೆ ಹೆಚ್ಚಿನ ವಿಚಾರಣೆಗಾಗಿ ಕಡದಕಟ್ಟೆ ಪಂಚಾಯಿತಿಗೆ ಕರೆತರಲಾಯಿತು. ಇಓ ಗಂಗಾಧರ ಮೂರ್ತಿ ಉಪಸ್ಥಿತರಿದ್ದರು.

**ರಂಜಾನ್ ರೋಜಾ ಸಮಯ**

| ದಿನಾಂಕ : 27.04.2021 | ದಿನಾಂಕ 28.04.2021 |
| --- | --- |
| ಇಫ್ತೇಯಾರಿ ಸಮಯ : 6-48 | ಸಹೇರಿ ಸಮಯ : 4-50 |

# ಕೊರೊನಾ ಉಲ್ಬಣ : ಐಪಿಎಲ್‌ನಿಂದ ನಾಲ್ಕು ಆಟಗಾರರ ನಿರ್ಗಮನ

ನವದೆಹಲಿ ಏ. 26 – ದೇಶದಲ್ಲಿ ಕೊರೊನಾ ಪರಿಸ್ಥಿತಿ ಉಲ್ಬಣಿಸುತ್ತಿರುವುದು ಐ.ಪಿ.ಎಲ್.ನಲ್ಲಿ ಪಾಲ್ಗೊಂಡಿರುವ ಕ್ರಿಕೆಟಿಗರಲ್ಲಿ ಕಳವಳ ತಂದಿದೆ. ಭಾರತೀಯ ಕ್ರಿಕೆಟಿಗ ರವಿಚಂದ್ರನ್ ಅಶ್ವಿನ್ ಹಾಗೂ ಆಸ್ಟ್ರೇಲಿಯಾದ ಕೆಲ ಆಟಗಾರರು ಪಂದ್ಯಾವಳಿಯಿಂದ ಹಿಂದೆ ಸರಿದಿದ್ದಾರೆ. ಆದರೆ, ಐ.ಪಿ.ಎಲ್. ಮುಂದುವರೆಯಲಿದೆ ಎಂದು ಬಿಸಿಸಿಐ ತಿಳಿಸಿದೆ.

ದೆಹಲಿ ಕ್ಯಾಪಿಟಲ್ಸ್ ಪರವಾಗಿ ಆಡುತ್ತಿರುವ ಅಶ್ವಿನ್, ತಮ್ಮ ಕುಟುಂಬ ಕೊರೊನಾ ವಿರುದ್ಧ ಹೋರಾಟ ನಡೆಸುತ್ತಿದೆ. ಅವರಿಗೆ ಬೆಂಬಲಿಸಲು ಮರಳುತ್ತಿರುವುದಾಗಿ ಹೇಳಿದ್ದಾರೆ.

ರಾಜಸ್ಥಾನ ರಾಯಲ್ಸ್‌ನ ಆಂಡ್ರೂ ಟೈ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರಿನ ಕೇನ್ ರಿಚರ್ಡ್‌ಸನ್ ಹಾಗೂ ಆಡಂ ಜಂಪಾ ಅವರು ಪಂದ್ಯಾವಳಿಯಿಂದ ಹಿಂದೆ ಸರಿದಿದ್ದಾರೆ. ವೈಯಕ್ತಿಕ ಕಾರಣಗಳಿಂದಾಗಿ ಪಂದ್ಯಾವಳಿಯಿಂದ ಹಿಂದೆ ಸರಿಯುತ್ತಿರುವುದಾಗಿ ಅವರು ಹೇಳಿದ್ದಾರೆ.

ಭಾರತದಿಂದ ಬರುವವರಿಗೆ ಆಸ್ಟ್ರೇಲಿಯಾದಲ್ಲಿ ಕ್ವಾರಂಟೈನ್‌ನಲ್ಲಿ ಇರಿಸಲಾಗುತ್ತಿದೆ. ಈ ಹೆದರಿಕೆ ತಮಗಿದೆ ಎಂದು ಟೈ ಹೇಳಿದ್ದಾರೆ.

ಪಂದ್ಯಾವಳಿ ಮುಂದುವರೆಯಲಿದೆ ಎಂದು ಹೇಳಿರುವ ಬಿಸಿಸಿಐ, ಹೊರ ಹೋಗಲು ಬಯಸುವವರು ಹೋಗಬಹುದು ಎಂದು ಹೇಳಿದೆ.

ಆದರೆ, ಆಸ್ಟ್ರೇಲಿಯಾದ ಎಲ್ಲ ಆಟಗಾರರು ಹಿಂಜರಿಕೆ ಹೊಂದಿಲ್ಲ. ಆಸ್ಟ್ರೇಲಿಯಾದ ವೇಗದ ಬೌಲರ್ ನ್ಯಾಥನ್ ಕೌಲ್ಟರ್ ನೈಲ್ ಅವರು ಮುಂಬೈ ಇಂಡಿಯನ್ಸ್ ಪರವಾಗಿ ಆಡುತ್ತಿದ್ದು, ಈ ಸಂದರ್ಭದಲ್ಲಿ ಮನೆಗಿಂತ ಬಯೋ ಬಬಲ್‌ನಲ್ಲಿ ಇರುವುದೇ ಸುರಕ್ಷಿತ ಎನಿಸುತ್ತಿದೆ ಎಂದಿದ್ದಾರೆ.

ಇಂಗ್ಲೆಂಡ್ ಹಾಗೂ ನ್ಯೂಜಿಲ್ಯಾಂಡ್‌ನ ಹಲವಾರು ಆಟಗಾರರು ಪಂದ್ಯಾವಳಿಯಲ್ಲಿ ಪಾಲ್ಗೊಂಡಿದ್ದಾರೆ. ಅವರಾರೂ ವಾಪಸ್ಸಾಗುವ ಬಗ್ಗೆ ಹೇಳಿಕೆ ನೀಡಿಲ್ಲ. ಐ.ಪಿ.ಎಲ್. ಪಂದ್ಯಾವಳಿ ಮೇ 30ವರೆಗೆ ಮುಂದುವರೆಯಲಿದೆ. ಅಂತಿಮ ಪಂದ್ಯ ಅಹಮದಾಬಾದ್‌ನಲ್ಲಿ ನಡೆಯಲಿದೆ.

## 30ರವರೆಗೆ ದೇಶದ ಹಲವು ಕಡೆ ಮಳೆ

ನವದೆಹಲಿ, ಏ. 26 – ದೇಶದ ಹಲವು ಭಾಗಗಳಲ್ಲಿ ಏಪ್ರಿಲ್ 30ರ ವರೆಗೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.


## ಪರಮಾನಂದ ಎಸ್. ಯಾದವಾಡ್ ಬ್ಯಾಡಗಿ ನಿಧನ



ಜಗಳೂರು ಪಟ್ಟಣದ ದಿ|| ಶ್ರೀಮತಿ ಗಂಗಮ್ಮ ಮತ್ತು ದಿ|| ಗೌಡ್ರು ಸಂಕಣ್ಣನವರ ಅಳಿಯಂದಿರಾದ **ಶ್ರೀ ಪರಮಾನಂದ ಎಸ್. ಯಾದವಾಡ್ ಬ್ಯಾಡಗಿ** ಅವರು ದಿನಾಂಕ 26.4.2021ರ ಸೋಮವಾರದಂದು ಸೆಂಟ್ರಲ್ ಆಫ್ರಿಕಾದ ಮಲಾವಿ ದೇಶದ ಬ್ಲ್ಯಾನ್‌ಟೈರ್‌ನಲ್ಲಿ ನಿಧನರಾದರು.

ಮೃತರಿಗೆ 60 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಸೆಂಟ್ರಲ್ ಆಫ್ರಿಕಾದ ಮಲಾವಿ ದೇಶದ ಬ್ಲ್ಯಾನ್‌ಟೈರ್‌ನಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ

ಪತ್ನಿ : ಶೋಭಾ ಯಾದವಾಡ, ಮಗಳು : ದೀಪ್ತಿ ಯಾದವಾಡ
ಗೌಡ್ರು ಸಹೋದರರು, ಸಹೋದರಿಯರು, ಅಳಿಯಂದಿರು,
ಮಕ್ಕಳು, ಮೊಮ್ಮಕ್ಕಳು ಹಾಗೂ ಗೌಡ್ರು ವಂಶಸ್ಥರು, ಜಗಳೂರು.
ಮೊ. : 89719 49221, 98863 50345, 99019 93255



## ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ ನಿಟುವಳ್ಳಿ ಕಾಮ್ರೇಡ್ ಲೆನಿನ್ ನಗರ ಐಟಿಐ ಕಾಲೇಜ್ ಪಕ್ಕದಲ್ಲಿರುವ ಶ್ರೀ ಚೌಡೇಶ್ವರಿ ಸೇವಾ ಸಮಿತಿ ಸಹ ಕಾರ್ಯದರ್ಶಿಯಾಗಿದ್ದ

**ಶ್ರೀ ಎಂ.ಬಿ. ಬಸವರಾಜಪ್ಪ**

ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಹೆಚ್.ಕೆ. ರಾಮಚಂದ್ರಪ್ಪ – ಗೌರವಾಧ್ಯಕ್ಷರು
ಕೆ.ಬಿ. ಹನುಮಂತಪ್ಪ – ಅಧ್ಯಕ್ಷರು
ಎ.ಹೆಚ್. ಹನುಮಂತಪ್ಪ – ಉಪಾಧ್ಯಕ್ಷರು
ಹೆಚ್.ಬಿ. ಶಿವರುದ್ರಪ್ಪ – ಕಾರ್ಯದರ್ಶಿ
ಹೆಚ್.ಹೆಚ್. ಮಲ್ಲಿಕಾರ್ಜುನಪ್ಪ – ಖಜಾಂಚಿ
ಎನ್.ಹೆಚ್. ರಾಮಪ್ಪ – ಸಹ ಖಜಾಂಚಿ

ನಿರ್ದೇಶಕರು :

✦ ವದ್ದೆಪ್ಪರ ಅಂಜಿನಪ್ಪ ✦ ಕರಿಯಪ್ಪರ ಹಾಲೇಶಿ ✦ ಎಂ.ಬಿ. ಪರಮೇಶ್ವರಪ್ಪ
✦ ಹೆಚ್.ಆರ್. ವಿಜಯಕುಮಾರ್ ✦ ಹೆಚ್.ಓ. ಅರುಣ್‌ಕುಮಾರ್
✦ ಹೆಚ್.ಹೆಚ್. ಕಿರಣ್‌ಕುಮಾರ್

**ಶ್ರೀ ಚೌಡೇಶ್ವರಿ ಸೇವಾ ಸಮಿತಿ**

ಕಾಂ. ಲೆನಿನ್ ನಗರ, ಐಟಿಐ ಕಾಲೇಜ್ ಪಕ್ಕ, ನಿಟುವಳ್ಳಿ, ದಾವಣಗೆರೆ



## ಆರತಕ್ಷತೆ ಮುಂದೂಡಿಕೆ



ಆತ್ಮೀಯ ಬಂಧು-ಮಿತ್ರರೇ, ದಾವಣಗೆರೆ ನಗರ ವಾಸಿ,

ಶ್ರೀಮತಿ ಪಂಕಜ ಮತ್ತು ಶ್ರೀ ಶಿಂಗ್ರಿಹಳ್ಳಿ ಈ. ಭೀಮಣ್ಣ ಅವರ ಪುತ್ರ

**ಚಿ|| ರಾ|| ಡಾ|| ಆದರ್ಶ್ ಎಸ್.ಬಿ.**

ಹಾಗೂ

**ಚಿ|| ಕುಂ|| ಸೌ|| ಡಾ|| ಶ್ವೇತಾ ಆರ್.ಪಿ.**

ಇವರ ವಿವಾಹ ಮಹೋತ್ಸವವು ದಿನಾಂಕ 25.04.2021ರ ಭಾನುವಾರದಂದು ಮಂಗಳೂರಿನಲ್ಲಿ ಗುರು-ಹಿರಿಯರ, ಬಂಧು-ಮಿತ್ರರ ಸಮ್ಮುಖದಲ್ಲಿ ಯಶಸ್ವಿಯಾಗಿ ನೆರವೇರಿತು ಎಂದು ತಿಳಿಸಲು ಸಂತೋಷಿಸುತ್ತೇವೆ. ಈ ಪ್ರಯುಕ್ತ ದಿನಾಂಕ 28.04.2021ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ 'ಆರತಕ್ಷತೆ' ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಆದರೆ 'ಕೊರೊನಾ' ಮತ್ತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಕಾನೂನು ಪಾಲನೆ ಮಾಡಿ ಗೌರವಿಸುವ ದೃಷ್ಟಿಯಿಂದ ಹಾಗೂ ನಿಮ್ಮೆಲ್ಲರ ಆರೋಗ್ಯ ಮುಖ್ಯವಾಗಿರುವುದರಿಂದ, ಆದರ್ಶ್ ಹಾಗೂ ಶ್ವೇತಾ ಅವರ 'ವಿವಾಹ ಆರತಕ್ಷತೆ'ಯನ್ನು ಮುಂದೂಡಿದ್ದೇವೆಂದು ಈ ಮೂಲಕ ತಮ್ಮೆಲ್ಲರಿಗೂ ತಿಳಿಯಬಯಸುತ್ತೇವೆ.

ತಮ್ಮ ವಿಶ್ವಾಸಿಗಳು :

✦ ಈ. ಷಣ್ಮುಖಪ್ಪ ✦ ಈ. ಭೀಮಣ್ಣ ✦ ಈ. ದೇವೇಂದ್ರಪ್ಪ
✦ ಈ. ಹೇಮರಾಜ್, ದಾವಣಗೆರೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte